ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ರವೀಂದ್ರ ಜಡೇಜ ಅವರ 43 ರನ್‌ಗಳ ಆಟದ ನೆರವಿನಿಂದ ರಾಜಸ್ಥಾನ ರಾಯಲ್ಸ್, ಲಖನೌ ಸೂಪರ್ ಜೈಂಟ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ 6 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿದೆ.

23 ಏಪ್ರಿಲ್ 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 44 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಲಿಂಬೆ ಬೇಸಾಯದಲ್ಲಿ ಸಸ್ಯ ಸಂರಕ್ಷಣೆ » 2

ಆಲೂರಿಗೆ ಮತ್ತೊಂದು ವಿದ್ಯುತ್ ಉಪಕೇಂದ್ರ » 3



ಭಯೋತ್ಪಾದನೆ ವಿರುದ್ಧ ಹೋರಾಟ : ಭಾರತಕ್ಕೆ ಬೆಂಬಲ » 4

ಜಿಲ್ಲೆಗಿಂದು ಹೆಚ್.ಡಿ.ಕೆ. ಭೇಟಿ

• ಪ್ರಜೋದಯ ವರದಿ

ಹಾಸನ: ತಾಲ್ಲೂಕಿನ ಕಟ್ಟಾಯ ಹೋಬಳಿ ದೊಡ್ಡಬೀಕನಹಳ್ಳಿ ಗ್ರಾಮದಲ್ಲಿ ಪುನರ್ ನಿರ್ಮಾಣಗೊಂಡಿರುವ ಶ್ರೀ ಆಂಜನೇಯ ಸ್ವಾಮಿ ದೇವಾಲಯದ ಉದ್ಘಾಟನಾ ಸಮಾರಂಭ ಗುರುವಾರ ನಡೆಯಲಿದ್ದು, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಭಾಗವಹಿಸಲಿದ್ದಾರೆ.

ಬೆಳಿಗ್ಗೆ 11.30ಕ್ಕೆ ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ಆದಿ ಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ವಹಿಸಲಿದ್ದಾರೆ. ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ದೇವಾಲಯ ಉದ್ಘಾಟಿಸುವರು. ಶಾಸಕ ಸಿಮೆಂಟ್ ಮಂಜು ಅವರು ಅಧ್ಯಕ್ಷತೆ ವಹಿಸಲಿದ್ದು, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಸಂಸದ ಶ್ರೇಯಸ್ ಪಟೇಲ್, ಶಾಸಕರಾದ ಹೆಚ್.ಪಿ.ಸ್ವರೂಪ್ ಪ್ರಕಾಶ್, ಸಿ.ಎನ್ ಬಾಲಕೃಷ್ಣ, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಎಸ್.ದ್ಯಾವೇಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್. ಮುದ್ದೇಗೌಡ ಅವರು ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಭಾರತಕ್ಕೆ ಬರುತ್ತಿದ್ದ ಹಡಗಿನ ಮೇಲೆ ಇರಾನ್ ದಾಳಿ

ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ವಶ | ಮುಂದುವರಿದ ದಿಗ್ಬಂಧನ

• ಪ್ರಜೋದಯ ವರದಿ

ನವದೆಹಲಿ: ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕದನ ವಿರಾಮ ವಿಸ್ತರಿಸಿದ ಬೆನ್ನಲ್ಲೇ ಹೊರ್ಮುಜ್ ಜಲಸಂಧಿಯ ಮೂಲಕ ಭಾರತಕ್ಕೆ ಬರುತ್ತಿದ್ದ ಎರಡು ಹಡಗುಗಳ ಮೇಲೆ ಇರಾನ್ ಬುಧವಾರ ದಾಳಿ ಮಾಡಿ ವಶಪಡಿಸಿಕೊಂಡಿದೆ.

ಇರಾನಿನ ಕ್ರಾಂತಿಕಾರಿ ಗಾರ್ಡ್ ಕಾರ್ಪ್ಸ್‌ನ ನೌಕಾಪಡೆಯು ಬೆಳಿಗ್ಗೆ ಹೊರ್ಮುಜ್ ಜಲಸಂಧಿಯಲ್ಲಿ ನಿಮಯ ಉಲ್ಲಂಘನೆ ಮಾಡಿದ ಮೂರು ಹಡಗುಗಳನ್ನು ಗುರುತಿಸಿ, ದಾಳಿ ನಡೆಸಿ ವಶಪಡಿಸಿಕೊಂಡಿದ್ದು ಅವುಗಳನ್ನು ಇರಾನ್ ಜಲಗಡಿಯೊಳಕ್ಕೆ ಕರೆದೊಯ್ಯಲಾಗಿದೆ. ಮೂರು ಹಡಗುಗಳ ಪೈಕಿ ಎರಡು ಭಾರತಕ್ಕೆ ಬರುತ್ತಿದ್ದವು.

ಬ್ರಿಟಿಷ್ ಮಿಲಿಟರಿಯ ಯುಕೆ ಸಾಗರ ವ್ಯಾಪಾರ ಕಾರ್ಯಾಚರಣೆ ಕೇಂದ್ರದ ಪ್ರಕಾರ, ಇರಾನ್ ಬುಧವಾರ ಬೆಳಿಗ್ಗೆ ಹಾರ್ಮುಜ್ ಜಲಸಂಧಿಯಲ್ಲಿ ಮೊದಲು ಕಂಟೇನರ್ ಹಡಗಿನ ಮೇಲೆ ಗುಂಡು ಹಾರಿಸಿತು, ನಂತರ ಸ್ವಲ್ಪ ಸಮಯದ ನಂತರ ಎರಡನೇ ಹಡಗಿನ ಮೇಲೂ ಗುಂಡು ಹಾರಿಸಿತು. ಇರಾನಿನ ರಾಜ್ಯ ದೂರದರ್ಶನ ನಂತರ ಈ ಹಡಗುಗಳನ್ನು ಇರಾನ್ ಕ್ರಾಂತಿಕಾರಿ ಗಾರ್ಡ್ ಕಾರ್ಪ್ಸ್ ಕಣ್ಗಾವಲಿನಲ್ಲಿ ಕರೆದೊಯ್ಯಲಾಯಿತು ಎಂದು ಹೇಳಿದೆ.

ಈ ಹಡಗುಗಳನ್ನು ಎಂಎಸ್‌ಸಿ ಫ್ರಾನ್ಸೆಸ್ಕಾ ಮತ್ತು ಎಪಾಮಿನೊಂಡಾಸ್ ಎಂದು ಗುರುತಿಸಲಾಗಿದೆ. ಇಪಮೊನಾಡಸ್ ಎಂಬ ಮತ್ತೊಂದು ಹಡಗನ್ನು ವಶಕ್ಕೆ ಪಡೆಯಲಾಗಿದೆ. ಇದು ಯಾವ ದೇಶದ್ದು ಎಂಬುದು ತಿಳಿದು ಬಂದಿಲ್ಲ. ಈ ಹಡಗು ನಮ್ಮ ಕಡಲ ಭದ್ರತೆಗೆ ಅಪಾಯವನ್ನುಂಟುಮಾಡುತ್ತಿತ್ತು ಎಂದು ಇರಾನ್ ಆರೋಪಿಸಿದೆ.

ಮೊದಲ ಹಡಗಿನ ಮೇಲೆ ಐಆರ್‌ಜಿಸಿ ಗನ್ ಬೋಟ್‌ನಿಂದ ದಾಳಿ ನಡೆಸಿತ್ತು. ಗುಂಡು ಹಾರಿಸುವ ಮೊದಲು ಐಆರ್‌ಜಿಸಿ ಯಾವುದೇ ಎಚ್ಚರಿಕೆ ನೀಡಲಿಲ್ಲ, ಯಾವುದೇ ಸಾವುನೋವುಗಳು ಸಂಭವಿಸಿಲ್ಲ, ಏತನ್ಮಧ್ಯೆ, ಹಡಗು ಇರಾನಿನ ಸಶಸ್ತ್ರ ಪಡೆಗಳ ಎಚ್ಚರಿಕೆಗಳನ್ನು ನಿರ್ಲಕ್ಷಿಸಿದ ನಂತರ ಗುಂಡು ಹಾರಿಸಲಾಗಿದೆ ಎಂದು ಇರಾನಿನ ಸುದ್ದಿ ಸಂಸ್ಥೆ ನೂರ್ ನ್ಯೂಸ್ ಹೇಳಿಕೊಂಡಿದೆ. ಫಾರ್ಸ್ ನ್ಯೂಸ್ ಏಜೆನ್ಸಿ ಇದನ್ನು ಹೊರ್ಮುಜ್ ಜಲಸಂಧಿಯ ಮೇಲೆ ತನ್ನ ನಿಯಂತ್ರಣವನ್ನು ಕಾನೂನುಬದ್ಧವಾಗಿ ಜಾರಿಗೊಳಿಸಲು ಇರಾನ್‌ನ ಪ್ರಯತ್ನ ಎಂದು ಬಣ್ಣಿಸಿದೆ.

ಇರಾನ್‌ನಿಂದ ಹೊರಟ ಸರಕು ಸಾಗಣೆ ಹಡಗಿನ ಮೇಲೆ ಬುಧವಾರ ಗುಂಡು ಹಾರಿಸಲಾಗಿದ್ದು, ಆ ಹಡಗು ಸಮುದ್ರದಲ್ಲಿ ನಿಂತಲ್ಲೇ ನಿಂತಿದೆ ಎಂದು ಬ್ರಿಟೀಷ್ ಕಡಲ ಸಂಸ್ಥೆಯೊಂದು ವರದಿ ಮಾಡಿದೆ. ಅಮೇರಿಕವೇ ಈ ದಾಳಿ ನಡೆಸಿರುವ ಸಾಧ್ಯತೆ ಇದ್ದು, ಇರಾನ್ ಬಂದರುಗಳ ಮೇಲೆ ದಿಗ್ಬಂಧನವನ್ನು ಮುಂದುವರಿಸಿದೆ ಎಂದು ವರದಿ ತಿಳಿಸಿದೆ.

ಸರಕು ಸಾಗಣೆ ಹಡಗು ಗುಂಡಿನ ದಾಳಿಯಿಂದ ನಿಂತಲ್ಲೇ ನಿಂತಿದೆ. ಸಿಬ್ಬಂದಿ ಸುರಕ್ಷಿತರಾಗಿದ್ದಾರೆ. ಹಡಗಿಗೆ ಯಾವುದೇ ಹಾನಿಯಾಗಿಲ್ಲ, ಈ ಘಟನೆ ಇರಾನ್‌ನ ಪಶ್ಚಿಮಕ್ಕೆ ಎಂಟು ನಾಟಿಕಲ್ ಮೈಲುಗಳಷ್ಟು ದೂರದಲ್ಲಿ ನಡೆದಿದೆ ಎಂದು ಬ್ರಿಟನ್‌ನ ಕಡಲ ವ್ಯಾಪಾರ ಕಾರ್ಯಾಚರಣೆ ಕೇಂದ್ರ ತಿಳಿಸಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ಇರಾನ್, ಶತ್ರುಗಳಿಗೆ ತಕ್ಕ ಉತ್ತರ ನೀಡುವುದಾಗಿ ಗುಡುಗಿ, ಅಮೇರಿಕಾ ನೆಲೆಗಳ ಮೇಲೂ ದಾಳಿ ನಡೆಸುವ ಎಚ್ಚರಿಕೆ ಕೊಟ್ಟಿದೆ. ಇತ್ತ, ಹೊರ್ಮುಜ್ ಜಲಸಂಧಿಯಲ್ಲಿ ತನ್ನ ಎಚ್ಚರಿಕೆ ಮೀರಿ ಮುನ್ನುಗ್ಗುತ್ತಿದ್ದ ಹಡಗಿನ ಮೇಲೆ ಇರಾನ್ ರೆವಲ್ಯೂಷನರಿ ಗಾರ್ಡ್ಸ್ ಗುಂಡಿನ ದಾಳಿ ನಡೆಸಿದೆ. ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅನಿರ್ದಿಷ್ಟಾವಧಿಗೆ ಕದನ ವಿರಾಮ ಘೋಷಿಸಿದ್ದರೂ ಗುಂಡಿನ ಚಕಮಕಿ ನಿಲ್ಲದೇ ಇರುವುದು ಎರಡನೇ ಸುತ್ತಿನ ಮಾತುಕತೆ ಬಗ್ಗೆ ಸಂಶಯ ಮೂಡಿಸಿದೆ.

ಕದನ ವಿರಾಮ ವಿಸ್ತರಿಸಿದ ಟ್ರಂಪ್

ಇರಾನ್-ಅಮೇರಿಕಾ ನಡುವಿನ ಯುದ್ಧ ವಿರಾಮ ಅಂತ್ಯಗೊಳ್ಳುವ ಮುನ್ನವೇ ಅನಿರ್ದಿಷ್ಟಾವಧಿಗೆ ಯುದ್ಧ ವಿರಾಮ ವಿಸ್ತರಿಸಿರುವುದಾಗಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇರಾನ್ ನಾಯಕರು ಮತ್ತು ಪ್ರತಿನಿಧಿಗಳು ಏಕರೂಪದ ಪ್ರಸ್ತಾವನೆಯೊಂದಿಗೆ ಬರುವವರೆಗೆ ಯುದ್ಧ ವಿರಾಮ ಮುಂದುವರಿಸುತ್ತೇವೆ. ಶಾಂತಿ ಮಾತುಕತೆಗೆ ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನದ ವಿನಂತಿಗೆ ತಾನು ಒಪ್ಪಿಕೊಂಡಿದ್ದೇನೆ. ಮಂಗಳವಾರವಷ್ಟೇ ಪಾಕಿಸ್ತಾನದ ಪ್ರಸ್ತಾವನೆ ಕುರಿತು ಉತ್ತರಿಸಿದ್ದ ಟ್ರಂಪ್, ಯುದ್ಧ ವಿರಾಮ ವಿಸ್ತರಣೆ ಇಲ್ಲ, ಇರಾನ್ ಮೇಲೆ ಬಾಂಬ್ ನಡೆಸುತ್ತೇವೆಂದು ಹೇಳಿದ್ದರು. ಹಗಲು ಕಳೆದು ರಾತ್ರಿಯಾಗುವಷ್ಟರಲ್ಲಿ ಟ್ರಂಪ್ ತಮ್ಮ ಹೇಳಿಕೆ ಬದಲಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅಪದ್ಧ ಪದ ಬಳಕೆ: ಚುನಾವಣಾ ಆಯೋಗ ನೋಟೀಸ್

• ಪ್ರಜೋದಯ ವರದಿ

ನವದೆಹಲಿ: ತಮಿಳುನಾಡಿನಲ್ಲಿ ಚುನಾವಣಾ ಪ್ರಚಾರದ ವೇಳೆ ಮಾತಿನ ಭರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕರಿಗೆ ಹೋಲಿಸಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಚುನಾವಣಾ ಆಯೋಗ ನೋಟೀಸ್ ಜಾರಿಗೊಳಿಸಿದ್ದು, 24 ಗಂಟೆಯೊಳಗೆ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ.

ಖರ್ಗೆ ಅವರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ್ದ ಬಿಜೆಪಿ ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು. ಖರ್ಗೆ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿರುವ ಆಯೋಗವು ಪ್ರತಿಕ್ರಿಯೆ ನೀಡುವಂತೆ ಹೇಳಿದೆ.

ಏತನ್ಮಧ್ಯೆ ಎಐಎಡಿಎಂಕೆ ಸೇರುವುದನ್ನು ಖರ್ಗೆ ಪ್ರಶ್ನಿಸಿ ಅಣ್ಣಾದೊರೈ ಅವರ ಪ್ರತಿರೂಪವನ್ನು ಪ್ರದರ್ಶಿಸುವ ಎಐಎಡಿಎಂಕೆ ಸದಸ್ಯರು ಮೋದಿಯೊಂದಿಗೆ ಹೇಗೆ ಹೊಂದಾಣಿಕೆ ಮಾಡಿಕೊಳ್ಳಬಹುದು. ಅವರು ಭಯೋತ್ಪಾದಕ ಎಂದು ಖರ್ಗೆ ಹೇಳಿದ್ದರು. ಬಿಜೆಪಿಗೆ ಸಮಾನತೆಯಲ್ಲಿ ನಂಬಿಕೆ ಇಲ್ಲ, ಅವರ ಪಕ್ಷ ಸಮಾನತೆ ಮತ್ತು ನ್ಯಾಯದ ತತ್ವಗಳಲ್ಲಿ ನಂಬಿಕೆ ಇಡುವುದಿಲ್ಲ. ಅವರು ಎಐಎಡಿಎಂಕೆ ಜೊತೆ ಹೋಗುತ್ತಿದ್ದಾರೆಂದು ಖರ್ಗೆ ಹೇಳಿದರು.

ಗೃಹ ಸಚಿವ ಅಮಿತ್ ಶಾ ಸೇರಿ ಹಲವಾರು ಬಿಜೆಪಿ ನಾಯಕರು ಮಲ್ಲಿಕಾರ್ಜುನ ಖರ್ಗೆ ಅವರನ್ನು ಖಂಡಿಸಿದರು. ವಿಷಯ ಉಲ್ಬಣಗೊಳ್ಳುತ್ತಿದ್ದಂತೆ, ಮಲ್ಲಿಕಾರ್ಜುನ ಖರ್ಗೆ ತಮ್ಮ ತಪ್ಪನ್ನು ಅರಿತುಕೊಂಡು ತಕ್ಷಣವೇ ಹೇಳಿಕೆಯನ್ನು ಸ್ಪಷ್ಟಪಡಿಸಿದರು. ಪ್ರಧಾನಿ ಮೋದಿ ಅವರನ್ನು ಭಯೋತ್ಪಾದಕ ಎಂದು ಕರೆಯಲಿಲ್ಲ, ತಮ್ಮ ಮಾತಿನರ್ಥ ಮೋದಿ ಜನರನ್ನು ಹೆದರಿಸುತ್ತಿದ್ದಾರೆ ಎಂದಾಗಿತ್ತು ಎಂದು ಸ್ಪಷ್ಟನೆ ನೀಡಿದ್ದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ವಿರುದ್ಧ ನಿನ್ನೆ ಬಿಜೆಪಿ ಚುನಾವಣಾ ಆಯೋಗಕ್ಕೆ ಔಪಚಾರಿಕ ಲಿಖಿತ ದೂರು ಸಲ್ಲಿಸಿತ್ತು. ಬಿಜೆಪಿಯ ಹಿರಿಯ ನಾಯಕರಾದ ನಿರ್ಮಲಾ ಸೀತಾರಾಮನ್, ಕೇಂದ್ರ ಸಚಿವ ಕಿರಣ್ ರಿಜಿಜು, ಕೇಂದ್ರ ಸಚಿವ ಅರ್ಜುನ್ ರಾಮ್ ಮೇಘವಾಲ್ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರು ಚುನಾವಣಾ ಆಯೋಗದ ಕಚೇರಿಗೆ ಭೇಟಿ ನೀಡಿ ಖರ್ಗೆ ಅವರ ಹೇಳಿಕೆಗೆ ಆಕ್ಷೇಪಣೆ ಸಲ್ಲಿಸಿದ್ದರು.

ವಿಶ್ವ ಭೂಮಿ ದಿನ: ಜಾಗೃತಿ ಜಾಥಾ

• ಪ್ರಜೋದಯ ವರದಿ

ಹಾಸನ: ವಿಶ್ವ ಭೂಮಿ ದಿನದ ಅಂಗವಾಗಿ ಏಕಲವ್ಯ ರೋವರ್ಸ್, ಜೀವ ಜಲ ಫೌಂಡೇಶನ್, ಪೂರ್ಣ ಪ್ರಜ್ಞ ಸಮೂಹ ಸಂಸ್ಥೆ ಹಾಗು ಭಾರತ ಸ್ಕೌಟ್ಸ್ ಅಂಡ್ ಗೈಡ್ಸ್ ವತಿಯಿಂದ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಇರುವುದೊಂದೇ ಭೂಮಿ, ಅದನ್ನು ರಕ್ಷಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಭೂಮಿ ರಕ್ಷಣೆ ಬಗ್ಗೆ ಕೇವಲ ಮಾತನಾಡಿದರೆ, ಮಾತಿನಲ್ಲಿ ಹೇಳಿದರೆ ಸಾಲುವುದಿಲ್ಲ, ಪರಿಸರ ರಕ್ಷಣೆ ಮಾಡುವುದು, ಮಾಲಿನ್ಯ ತಡೆಯುವುದು ಎಲ್ಲಾ ಕೆಲಸ ಸರ್ಕಾರದ್ದೇ ಅಲ್ಲ, ಪ್ರತಿಯೊಬ್ಬ ನಾಗರಿಕರು ಭೂಮಿ ಉಳಿಸುವ, ಪರಿಸರ ರಕ್ಷಣೆ ಮಾಡುವ ಕೆಲಸ ಮಾಡಬೇಕು. ಇದು ಅವರ ಜವಾಬ್ದಾರಿ. ಅದಕ್ಕಾಗಿ ಎಲ್ಲರೂ ಕಾರ್ಯ ಪ್ರವೃತ್ತರಾಗಬೇಕೆಂದರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ, ಸ್ಕೌಟ್ಸ್ ಅಂಡ್ ಗೈಡ್ಸ್‌ನ ಕಾಂಚನಮಾಲ, ಆರ್.ಜಿ.ಗಿರೀಶ್, ಕಂಚಮಾರನಹಳ್ಳಿ ಕಾಂತಣ್ಣ ಮೊದಲಾದವರಿದ್ದರು.

ಬಿಸಿಲಿನ ಪ್ರಖರತೆಗೆ ಆವಿಯಾಗುತ್ತಿದೆ ಅಣೆಕಟ್ಟೆ ನೀರು

ಬರಿದಾದ ಕೆರೆ-ಕಟ್ಟೆಗಳಿಗೆ ನೀರು ಹರಿಸಿ ಬಾಯಾರಿಕೆ ನೀಗಿಸುವಂತೆ ಕೂಗು

• ಪ್ರಜೋದಯ ವರದಿ

ಹಾಸನ: ಬಿಸಿಲಿನ ಪ್ರಖರತೆಗೆ ಜಿಲ್ಲೆಯ ಜೀವನಾಡಿಯಾಗಿರುವ ಹೇಮಾವತಿ ಅಣೆಕಟ್ಟೆಯಲ್ಲಿ ನೀರಿನ ಪ್ರಮಾಣ ದಿನೇ ದಿನೇ ಕುಸಿಯುತ್ತಿದೆ. ಮತ್ತೊಂದೆಡೆ ಬರಿದಾಗುತ್ತಿರುವ ಕೆರೆ-ಕಟ್ಟೆಗಳಿಗೆ ನೀರು ಹರಿಸಿ, ಜನ-ಜಾನುವಾರುಗಳ ಬಾಯಾರಿಕೆ ನೀಗಿಸಬೇಕೆಂಬ ಕೂಗು ಕೇಳಿ ಬರುತ್ತಿದೆ.

ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಜಲಾಶಯದ ನೀರು ವೇಗವಾಗಿ ಆವಿಯಾಗುತ್ತಿದೆ. ಅಣೆಕಟ್ಟೆ ಮಾತ್ರವಲ್ಲದೇ ಜಿಲ್ಲೆಯ ಕೆರೆ, ಕಟ್ಟೆಗಳು ಕೂಡ ಒಣಗಿ ಹೋಗುತ್ತಿರುವುದರಿಂದ ನೀರಿನ ಮೂಲಗಳು ಬರಿದಾಗುತ್ತಿವೆ. ಈ ಸಂಕಷ್ಟದಿಂದ ಜನ-ಜಾನುವಾರುಗಳನ್ನು ಪಾರು ಮಾಡಲು ಕನಿಷ್ಠ ಪ್ರಮಾಣ ನೀರನ್ನಾದರೂ ಕಾಲುವೆಗಳ ಮೂಲಕ ಕೆರೆಕಟ್ಟೆಗೆ ಹರಿಸಬೇಕೆಂದು ರೈತರು ಒತ್ತಾಯಿಸುತ್ತಿದ್ದಾರೆ.

ಜಲಾಶಯದಲ್ಲಿ ಪ್ರಸ್ತುತ 17.796 ಟಿಎಂಸಿ ನೀರು ಮಾತ್ರ ಲಭ್ಯವಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 19.378 ಟಿಎಂಸಿ ನೀರು ಸಂಗ್ರಹವಾಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ 2 ಟಿಎಂಸಿಯಷ್ಟು ನೀರಿನ ಕೊರತೆ ಕಂಡು ಬಂದಿದೆ. ಇದು ನೀರಿನ ಲಭ್ಯತೆ ಕುಸಿತವಾಗಿರುವುದು ಮತ್ತು ಮುಂದಿನ ದಿನಗಳಲ್ಲಿ ಸಮಸ್ಯೆ ತೀವ್ರಗೊಳ್ಳುವ ಲಕ್ಷಣಗಳನ್ನು ಎಚ್ಚರಿಸುತ್ತಿದೆ.



ಬಿಸಿಲಿನ ಝಳಕ್ಕೆ ಆವಿಯಾಗಿ ಅಣೆಕಟ್ಟೆ ಮತ್ತು ಹಿನ್ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಒಳಹರಿವು ಕೂಡ ಸಂಪೂರ್ಣ ಕ್ಷೀಣಿಸುವ ಹಂತಕ್ಕೆ ತಲುಪಿದೆ. ಇದಲ್ಲದೇ ನದಿಯಲ್ಲೂ ನೀರಿನ ಪ್ರಮಾಣ ಕುಸಿತ ಕಾಣುತ್ತಿರುವುದರಿಂದ ಜಲಚರಗಳನ್ನು ರಕ್ಷಿಸುವ ಉದ್ದೇಶದಿಂದ ಜಲಾಶಯದ ಹೊರ ಹರಿವನ್ನು ಹೆಚ್ಚಿಸುವ ಅನಿವಾರ್ಯತೆಯೂ ಎದುರಾಗಿದೆ.

ಜಲಾಶಯದಲ್ಲಿ ಈಗಿರುವ ಒಟ್ಟು ನೀರಿನಲ್ಲಿ ಪ್ರಮಾಣದಲ್ಲಿ 4 ಟಿಎಂಸಿ ಡೆಡ್ ಸ್ಟೋರೇಜ್ ಆಗಿರುವುದರಿಂದ, ವಾಸ್ತವವಾಗಿ ಬಳಕೆಗೆ ಲಭ್ಯವಿರುವ ನೀರು ಕೇವಲ 13 ಟಿಎಂಸಿ ಮಾತ್ರವಾಗಿದೆ. ಈ ನೀರನ್ನು ನಾಲೆಗೆ ಹರಿಸಿದರೆ, ಕುಡಿಯುವ ನೀರಿಗೆ ಹಾಹಾಕಾರ ಎದುರಾಗಲಿದೆ ಎಂಬ ಆತಂಕವೂ ಕಾಣುತ್ತಿದೆ.

ಜಲಾಶಯದ ನೀರಿನ ಮಟ್ಟ

ಹೇಮಾವತಿ ಜಲಾಶಯದ ಗರಿಷ್ಠ ಮಟ್ಟ 2922 ಅಡಿಗಳಾಗಿದ್ದು, ಬುಧವಾರ ನೀರಿನ ಮಟ್ಟ 2896.65 ಅಡಿಗಳಷ್ಟಿದೆ. ಜಲಾಶಯವು 37.103 ಟಿಎಂಸಿ ಗರಿಷ್ಠ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿದೆ. ಪ್ರಸ್ತುತ 17.796 ಟಿಎಂಸಿ ನೀರಿನ ಸಂಗ್ರಹ ವಾಗಿದೆ. 33 ಕ್ಯೂಸೆಕ್ ಒಳಹರಿವಿದೆ. ಜಲಾಶಯದಿಂದ ನದಿಗೆ 415 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ.

2025ರಲ್ಲಿ ಇದೇ ದಿನ ನೀರಿನ ಮಟ್ಟ 2899.45 ಅಡಿಗಳು, 19.373 ಟಿಎಂಸಿ ನೀರಿನ ಸಂಗ್ರಹ ಹೊಂದಿತ್ತು. 60 ಕ್ಯೂಸೆಕ್ ಒಳಹರಿವು ಬರುತ್ತಿದ್ದು, 380 ಕ್ಯೂಸೆಕ್ ನೀರನ್ನು ಹೊರಗೆ ಬಿಡಲಾಗಿತ್ತು.

22 ದಿನಗಳಲ್ಲಿ 1 ಟಿಎಂಸಿ ಖಾಲಿ

ಕಳೆದ 22 ದಿನಗಳಲ್ಲೇ ಸುಮಾರು 1 ಟಿಎಂಸಿ ನೀರು ಕಡಿಮೆಯಾಗಿದೆ. ಏಪ್ರಿಲ್ 1ರಂದು 18.680 ಟಿಎಂಸಿ ಇದ್ದ ನೀರಿನ ಮಟ್ಟ, ಏಪ್ರಿಲ್ 22ರ ವೇಳೆಗೆ 17.796 ಟಿಎಂಸಿಯಷ್ಟು ಗಣನೀಯವಾಗಿ ಇಳಿಕೆಯಾಗಿದೆ. ಇದು ಬಿಸಿಲಿನ ಪ್ರಖರತೆಯ ಪರಿಣಾಮ ಸ್ಪಷ್ಟವಾಗಿ ಗೋಚರಿಸುವಂತೆ ಮಾಡಿದೆ.

ಬತ್ತಿ ಹೋಗುತ್ತಿವೆ ಕೆರೆ-ಕಟ್ಟೆ

ಜಿಲ್ಲೆಯ ಹಲವೆಡೆ ಕೆರೆ-ಕಟ್ಟೆಗಳು ಬತ್ತಿ ಹೋಗಿದ್ದು, ಜಾನುವಾರು ಗಳಿಗೆ ಕುಡಿಯುವ ನೀರಿನ ಕೊರತೆ ಉಂಟಾಗಿದೆ. ನೀರಿನ ಬಳಕೆಯನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವುದು, ಅನಾವಶ್ಯಕ ಹೊರ ಹರಿವು ತಡೆಯುವುದು, ಮಳೆಗಾಲದವರೆಗೆ ಲಭ್ಯವಿರುವ ನೀರನ್ನು ಸಮರ್ಪಕವಾಗಿ ಹಂಚಿಕೆ ಮಾಡುವುದು ಅಗತ್ಯವಾಗಿದೆ. ಇಲ್ಲವಾದರೆ ಬೇಸಿಗೆಯ ಕೊನೆಯ ಹೊತ್ತಿಗೆ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗುವ ಸಾಧ್ಯತೆ ಇದೆ.

ಬಳಕೆಗೆ 13 ಟಿಎಂಸಿ ಮಾತ್ರ ಲಭ್ಯ

ಪ್ರಸ್ತುತ ಜಲಾಶಯದಲ್ಲಿ 17,796 ಟಿಎಂಸಿ ನೀರಿದ್ದರೂ, ಇದರಲ್ಲಿ 4.37 ಟಿಎಂಸಿ ಡೆಡ್ ಸ್ಟೋರೇಜ್ ಆಗಲಿದ್ದು, ಬಳಸಲು ಕೇವಲ 13 ಟಿಎಂಸಿ ಮಾತ್ರ ಲಭ್ಯವಾಗಲಿದೆ. ಈ 13 ಟಿಎಂಸಿ ನೀರಿನಲ್ಲೇ ಮಳೆಗಾಲದವರೆಗೂ ಕಾಲ ತಳ್ಳಬೇಕಿದೆ. ಹಾಸನ ನಗರಕ್ಕೆ ನಿತ್ಯ 30 ರಿಂದ 35 ಎಂಎಲ್‌ಡಿ (ಮಿಲಿಯನ್ ಲೀಟರ್ ಪರ್ ಡೇ) ನೀರಿನ ಅಗತ್ಯವಿದೆ. ಜಿಲ್ಲೆಯ ಸಕಲೇಶಪುರ, ಹೊಳೆನರಸೀಪುರಕ್ಕೆ ನದಿಯಿಂದಲೇ ನೇರವಾಗಿ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತದೆ. ಈಗಾಗಲೇ ನಗರದ ಸಾಕಷ್ಟು ಭಾಗಗಳಿಗೆ ಹೇಮಾವತಿ ಜಲಾಶಯದ ನೀರು ಪೂರೈಕೆಯಾಗುತ್ತಿಲ್ಲ. ಅಮೃತ್ ಯೋಜನೆ, ಜಲಜೀವನ್ ಮಿಷನ್ ಯೋಜನೆಗಳಿಗೆ ಜಲಾಶಯ ನೀರು ಬಳಕೆಯಾಗಬೇಕಿರುವುದರಿಂದ ಮುಂದಿನ ದಿನಗಳಲ್ಲಿ ಕುರಿಯುವ ನೀರಿಗೂ ಸಮಸ್ಯೆಯಾದರೂ ಆಶ್ಚರ್ಯವಿಲ್ಲ.

ಏ. 26ಕ್ಕೆ ತಣ್ಣೀರು ಹಳ್ಳ ಮಠದಲ್ಲಿ ವಿವಿಧ ಕಾರ್ಯಕ್ರಮ

• ಪ್ರಜೋದಯ ವರದಿ

ಹಾಸನ: ನಡೆದಾಡುವ ದೇವರು ಶ್ರೀ ಶಿವಕುಮಾರ ಸ್ವಾಮೀಜಿ ಅವರ 119ನೇ ಹಾಗು ಶ್ರೀ ಶಿವಲಿಂಗ ಸ್ವಾಮೀಜಿ ಅವರ 92ನೇ ಜಯಂತಿ ಕಾರ್ಯಕ್ರಮವನ್ನು ಏ. 26ರಂದು ಅದ್ದೂರಿಯಾಗಿ ಆಚರಿಸಲಾಗುತ್ತಿದೆ ಎಂದು ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ ಹೇಳಿದರು.

ಮಠದ ಆವರಣದಲ್ಲಿ ಬುಧವಾರ ನಡೆದ



ಧಾರ್ಮಿಕ ಸಮಾರಂಭದ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಅದೇ ದಿನ ವಿಜಯ ಕುಮಾರ ಸ್ವಾಮೀಜಿಯವರ ಜಂಗಮ ಪಟ್ಟಾಧಿಕಾರದ 56ನೇ ಮಾಸದ ಕಾರ್ಯಕ್ರಮ, ಶ್ರೀ ಶಿವಲಿಂಗ ಸ್ವಾಮೀಜಿ ದಾಸೋಹ ಭವನ ಲೋಕಾರ್ಪಣೆ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಯಶಸ್ವಿಗಾಗಿ ವಿವಿಧ ಸಮಿತಿ ರಚಿಸಲಾಯಿತು. ಸಭೆಯಲ್ಲಿ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮಿಜಿ, ಸಮಾಜ ಮುಖಂಡರಾದ ಬಿ.ಪಿ.ಐಸಾಮಿಗೌಡ, ಬಿ.ಡಿ. ಬಸವಣ್ಣ, ವಿದ್ಯಾಶಂಕರ್, ಲೆಕ್ಕ ಪರಿಶೋಧಕ ಕಾಂತರಾಜ್, ಮಠದ ಕಾರ್ಯದರ್ಶಿ ಸೋಮಣ್ಣ, ಕಟ್ಟಾಯ ಶಿವಕುಮಾರ್, ವಕೀಲ ಸೀಗೆ ಈಶ್ವರ್, ಯು.ಎಸ್. ಬಸವರಾಜ್, ನೇತ್ರಾವತಿ ಮತ್ತಿತರರಿದ್ದರು.

ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅವರನ್ನು ಶಾಸಕ ಹೆಚ್.ಪಿ.ಸ್ವರೂಪ್ ಅವರು ಭೇಟಿಯಾಗಿ ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕುಂದು ಕೊರತೆ ಹಾಗು ಅನುದಾನ ಅಲಭ್ಯತೆಯಿಂದ ಆಗುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿ ಅನುದಾನ ಕಲ್ಪಿಸುವಂತೆ ಕೋರಿದರು.

ಬಿಹಾರದ ಮುಗ್ಧ ಮಕ್ಕಳಿಗೆ ಕನ್ನಡವೇ ಅಚ್ಚುಮೆಚ್ಚು

-ಮಲ್ಲಿಕಾರ್ಜುನ ಕೊಚ್ಚರಗಿ

ಶಿಕ್ಷಕಿ ಪ್ರಮೀಳಾ ವಿಶೇಷ ಪ್ರಯತ್ನ | ಚಿಂದಿ ಆಯುವ ಕುಟುಂಬದಲ್ಲಿ ಬದಲಾವಣೆಯ ಬೆಳಕು

• ಪ್ರಜೋದಯ ವರದಿ

ಹಾಸನ: ದೂರದ ಬಿಹಾರದ ವಿದ್ಯಾರ್ಥಿಗಳು ತಾಲ್ಲೂಕಿನ ಸರ್ಕಾರಿ ಶಾಲೆಯೊಂದರಲ್ಲಿ ವ್ಯಾಸಂಗ ಮಾಡುತ್ತಿರುವುದು ಮಾತ್ರವಲ್ಲದೆ ಸುಲಲಿತವಾಗಿ ಕನ್ನಡ ಕಲಿತಿದ್ದು, ಶಿಕ್ಷಕಿಯೊಬ್ಬರ ಸತತ ಪ್ರಯತ್ನ ಹಾಗು ಕಾಳಜಿ ಈ ರೀತಿಯ ಬದಲಾವಣೆಗೆ ಕಾರಣವಾಗಿದೆ.

ತಾಲ್ಲೂಕಿನ ಪಿರುಮನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂತಹದೊಂದು ಚಮತ್ಕಾರ ನಡೆಯುತ್ತಿದ್ದು, ಚಿಂದಿ ಆಯುವ ಕೆಲಸಕ್ಕೆ ಬಿಹಾರದಿಂದ ಬಂದಿರುವ ಮಕ್ಕಳಿಗೆ ವಿದ್ಯಾ ದೇವತೆಯಾಗಿದ್ದಾರೆ ಶಿಕ್ಷಕಿ ಪ್ರಮೀಳಾ. ಸರ್ಕಾರಿ ಸಂಬಳ ಪಡೆದು ತಮ್ಮ ಪಾಡಿಗೆ ತಾವು ಕೆಲಸ ಮಾಡಿಕೊಂಡಿರುವ ಎಲ್ಲಾ ಅವಕಾಶಗಳಿದ್ದರೂ ಪ್ರಮೀಳಾ ಅವರು ಕಷ್ಟದ ಕೆಲವು ಜವಾಬ್ದಾರಿಗಳನ್ನು ವಹಿಸಿಕೊಂಡಿದ್ದಾರೆ. ಪ್ರಸ್ತುತ ಬೇಸಿಗೆ ರಜೆಯಿಂದ ತರಗತಿಗಳು ನಡೆಯುತ್ತಿಲ್ಲವಾದರೂ ಮಕ್ಕಳ ಸಂಪೂರ್ಣ ನಿಗಾ ಅವರೇ ವಹಿಸಿಕೊಂಡಿದ್ದಾರೆ.

ಮಕ್ಕಳ ಭವಿಷ್ಯ ಕಂಡು ಮರುಗಿದ ಮನ

19 ವರ್ಷಗಳಿಂದ ಪ್ರಮೀಳಾ ಅವರು ಪಿರುಮನಹಳ್ಳಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಾಲ್ಕೈದು ವರ್ಷಗಳ ಹಿಂದೆ ಶಾಲೆಗೆ ಹೋಗುತ್ತಿದ್ದಾಗ ಮುಗ್ಧ ಮಕ್ಕಳು ಚನ್ನಪಟ್ಟಣದ ಖಾಲಿ ಪ್ರದೇಶದಲ್ಲಿ ಬಿಸಿಲು, ಗಾಳಿಗೆ ಮೈಯೊಡ್ಡಿ ಆಟವಾಡುತ್ತಾ, ತಂದೆ-ತಾಯಿಯೊಂದಿಗೆ ಕೆಲಸ ಮಾಡಿಕೊಂಡಿರುವುದನ್ನು ನೋಡಿದ ಪ್ರಮೀಳಾ ಅವರು ಹತ್ತಿರಕ್ಕೆ ಹೋಗಿ ವಿಚಾರಿಸಿದ್ದಾರೆ. ಮಕ್ಕಳ ಪೋಷಕರಿಗೆ ಕನ್ನಡ ಬರುವುದಿಲ್ಲ, ಶಿಕ್ಷಕಿಗೆ ಹಿಂದಿ ಗೊತ್ತಿಲ್ಲ. ಮಾರನೇ ದಿನ ಹಿಂದಿ ಹಾಗು ಕನ್ನಡ ಭಾಷೆ ಬಲ್ಲ ವ್ಯಕ್ತಿಯೊಂದಿಗೆ ಹೋದಾಗ ಅವರ ಕಷ್ಟ ಸುಖಗಳನ್ನು ಆಲಿಸಿದ್ದಾರೆ. ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿ ಇಲ್ಲವಾದರೆ ಅವರು ನಿಮ್ಮಂತೆ ಚಿಂದಿ ಆಯಬೇಕಾಗುತ್ತದೆಂದು ತಿಳಿ ಹೇಳಿದಾಗ ಪೋಷಕರು ಶಾಲೆಗೆ ಕಳುಹಿಸಲು ಒಪ್ಪಿದರು. ಹತ್ತಿರದ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸ ಬಹುದಿತ್ತಾದರೂ ಪೋಷಕರ ಹಾಗು ಮಕ್ಕಳ ಅಗತ್ಯ ದಾಖಲೆಗಳಿಲ್ಲದ ಕಾರಣ ಪ್ರಮೀಳಾ ಅವರೇ ಮುತುವರ್ಜಿ ವಹಿಸಿ ತಮ್ಮ ಶಾಲೆಗೆ ಸೇರಿಸಿಕೊಂಡಿದ್ದಾರೆ.

ಶಾಲೆ ತಲುಪಲು ಸಮಯಕ್ಕೆ ಸರಿಯಾಗಿ ಸಾರಿಗೆ ಬಸ್‌ನ ವ್ಯವಸ್ಥೆ ಜಿಲ್ಲದ ಕಾರಣ ಅವರು ಆಟೋದಲ್ಲಿ ತೆರಳುತ್ತಾರೆ.

"ಪ್ರತಿ ಮಗುವಿನಲ್ಲೂ ವಿಶೇಷ ಪ್ರತಿಭೆ ಇದೆ. ಡ್ರಾಯಿಂಗ್, ವ್ಯಾಸಂಗ, ಸಂಗೀತ ಹೀಗೆ ಎಲ್ಲದರಲ್ಲೂ ವಿಶೇಷ ಆಸಕ್ತಿ ಹೊಂದಿದ್ದಾರೆ. ಹಾಗೆಯೇ ಬಿಟ್ಟಿದ್ದರೆ ಮಕ್ಕಳ ಭವಿಷ್ಯವೇ ಹಾಳಾಗುತ್ತಿತ್ತು. ಈ ಕೆಲಸಕ್ಕೆ ಕೈಹಾಕಿದಾಗ ರಿಸ್ಕ್ ಎನಿಸಿತಾದರೂ ಈಗ ಎಲ್ಲವೂ ಸುಲಭವಾಗಿದೆ. ಮೊದಲು ಮಕ್ಕಳ ಪೋಷಕರು ನನ್ನನ್ನು ಕಂಡು ಹೆದರಿದ್ದರು. ಈಗ ಕುಟುಂಬದ ಸದಸ್ಯೆಯಂತೆ ಭಾವಿಸಿ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಈ ಕೆಲಸ ಸಾರ್ಥಕತೆ ತಂದಿದೆ.

-ಪ್ರಮೀಳಾ, ಶಿಕ್ಷಕಿ

ಆರಂಭದಲ್ಲಿ ಎರಡು ಮಕ್ಕಳನ್ನು ತಮ್ಮೊಂದಿಗೆ ಕರೆದುಕೊಂಡು ಹಿಂದಿ ಮಕ್ಕಳಿಗೆ ಕನ್ನಡ ಕಲಿಸಲು ಆರಂಭಿಸಿದ ಪ್ರಮೀಳಾ ಅವರು ಸದ್ಯ 8 ಮಕ್ಕಳಿಗೆ ಆಸರೆಯಾಗಿದ್ದಾರೆ.

ಸ್ಥಳೀಯ ಮಕ್ಕಳೊಂದಿಗೆ ಬಾಂಧವ್ಯ ಬೆಸುಗೆ

ಆರಂಭದಲ್ಲಿ ಸ್ಥಳೀಯ ಮಕ್ಕಳೊಂದಿಗೆ ಬಿಹಾರದ ವಿದ್ಯಾರ್ಥಿಗಳ ಹೊಂದಾಣಿಕೆ ಕಷ್ಟವಾಯಿತಾದರೂ ಪ್ರಮೀಳಾ

» ನಾಲ್ಕನೇ ಪುಟದಲ್ಲಿ

ಮೇ 1ಕ್ಕೆ ಚನ್ನಕೇಶವ ಸ್ವಾಮಿ ದಿವ್ಯ ರಥೋತ್ಸವ

ಹಾಸನ: ನಗರದ ಲಕ್ಷ್ಮೀ ಚನ್ನಕೇಶವ ಸ್ವಾಮಿ ಜಾತ್ರಾ ಮಹೋತ್ಸವ ಏ.24 ರಿಂದ ಮೇ 10ರ ವರೆಗೆ ನೆರವೇರಲಿದೆ.

ಮೇ 1ರಂದು ದಿವ್ಯ ರಥೋತ್ಸವ ನಡೆಯಲಿದೆ. ಏ.24ರ ಶುಕ್ರವಾರ ರಾತ್ರಿ 8 ಗಂಟೆಗೆ ದೇವತಾರಾಧನೆ, ವಿಶ್ವಕ್ಸೇನಾರಾಧನಾ ಮೃತ್ತಿಕಾ ಸಂಗ್ರಹಣ, ಪೂರ್ವಕ ಅಂಕುರಾರ್ಪಣದೊಂದಿಗೆ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಲಾಗುವುದು. ಏ.30ರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2ರವರೆಗೆ ಕಲ್ಯಾಣೋತ್ಸವ, ಸಂಜೆ ಸಂಜನ ಗರುಡೋತ್ಸವ, ಗಜೇಂದ್ರ ಮೋಕ್ಷೋತ್ಸವ ನಡೆಯಲಿದೆ. ಮೇ 1ರ ಶುಕ್ರವಾರ ಮಧ್ಯಾಹ್ನ 12.30ರಿಂದ 1 ಗಂಟೆ ವೇಳೆಯಲ್ಲಿ ಸಲ್ಲುವ ಶುಭ ಕುಳೀರ ಲಗ್ನದಲ್ಲಿ ದಿವ್ಯ ಮಹಾರಥೋತ್ಸವ ಜರುಗಲಿದ್ದು, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣವರ್ ಸೇರಿ ಇತರರು ಪಾಲ್ಗೊಳ್ಳಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರಿಗೆ ಶಾಸಕ ಸಿ.ಎನ್.ಬಾಲಕೃಷ್ಣ ಒತ್ತಾಯ

ನಾಲೆಗಳಿಗೆ ನೀರು ಹರಿಸಲು ಕ್ರಮ ಕೈಗೊಳ್ಳಿ

• ಪ್ರಜೋದಯ ವರದಿ

ಹಾಸನ : ತಾಪಮಾನ ಏರಿಕೆಯಿಂದ ಕೆರೆ- ಕಟ್ಟೆಗಳು ಬತ್ತಿಹೋಗಿವೆ. ಕನಿಷ್ಠ 20 ದಿನಗಳಾದರೂ ನಾಲೆಗಳಿಗೆ ನೀರು ಹರಿಸಲು ಜಿಲ್ಲಾ ಉಸ್ತುವಾರಿ ಸಚಿವರು ಕ್ರಮ ಕೈಗೊಳ್ಳಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಒತ್ತಾಯಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೇಮಾವತಿ ಅಣೆಕಟ್ಟೆಯಲ್ಲಿ ಇನ್ನೂ 17 ಟಿಎಂಸಿ ನೀರಿದ್ದು, 4 ರಿಂದ 5 ಟಿಎಂಸಿ ನೀರನ್ನು ಕೆರೆಕಟ್ಟೆಗಳಿಗೆ ಹರಿಸಬೇಕು. ಜಲಾಶಯದ ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಒದಗಿಸುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದ್ದು, ಮುಂದುವರಿಸ ಬೇಕೆಂದು ಆಗ್ರಹಿಸಿದರು.

ನಾಲೆಗಳಿಗೆ ನೀರು ಹರಿಸುವುದರಿಂದ ಈ ಭಾಗದ ಅಲ್ಪಸ್ವಲ್ಪ ಬೆಳೆಗಳಿಗೂ ಅನುಕೂಲವಾಗಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಜಲಾಶಯದ ಅಧಿಕಾರಿಗಳಿಗೆ ನೀರು ಹರಿಸಲು ಸೂಚನೆ ನೀಡಬೇಕು. ಈ ಬಗ್ಗೆ ನಾನು ಕೂಡ ಸಚಿವರಿಗೆ ಮನವಿ ಸಲ್ಲಿಸಿದ್ದೇನೆ. ಈ ಬಗ್ಗೆ ಕ್ರಮ ಕೈಗೊಳ್ಳುವ ವಿಶ್ವಾಸವಿದೆ ಎಂದು ಹೇಳಿದರು.



"ತೆಂಗು ಬೆಳೆಗಾರರನ್ನು ಉಳಿಸುವ ನಿಟ್ಟಿನಲ್ಲಿ ತೋಟಗಾರಿಕೆ ಸಚಿವರ ನೇತೃತ್ವದಲ್ಲಿ ತೆಂಗು ಪ್ರದೇಶಗಳ ಶಾಸಕರ ಸಭೆ ಕರೆದು ಚರ್ಚಿಸಿ, ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಸರ್ಕಾರ ಮುಂದಾಗಬೇಕು. ಉತ್ತಮ ಬೆಲೆ ಇದ್ದರೂ ಫಸಲೇ ಇಲ್ಲದಿದ್ದರೇ ಏನು ಪ್ರಯೋಜನ.

-ಸಿ.ಎನ್.ಬಾಲಕೃಷ್ಣ, ಶಾಸಕ

ತೆಂಗಿಗೆ 100 ಕೋ.ರೂ. ಅನುದಾನ ನೀಡಿ

ತೆಂಗಿನ ಮರಗಳು ನುಸಿ, ಗರಿ, ಕಾಂಡ, ಸುಳಿ ರೋಗಗಳಿಗೆ ತುತ್ತಾಗಿ ಇಳುವರಿ ಕುಂಠಿತವಾಗಿದೆ. ತೆಂಗು ಬೆಳೆಗಾರರಿಗೆ ನೆರವು ನೀಡುವಂತೆ ಕಳೆದ ಎರಡು ಅಧಿವೇಶನದಿಂದ ಸರ್ಕಾರವನ್ನು ಒತ್ತಾಯಿಸಿಕೊಂಡು ಬರಲಾಗುತ್ತಿದೆ. ಆದರೂ ಕ್ರಮ ಕೈಗೊಂಡಿಲ್ಲ. ಕೊಬ್ಬರಿಗೆ ಬೆಲೆ ಏರಿಕೆಯಾಗಿರುವುದನ್ನು ಸ್ವಾಗತ ಮಾಡುತ್ತೇವೆ. ಆದರೆ, ಫಸಲು ಇಲ್ಲದೇ ರೈತರು ನಷ್ಟಕ್ಕೆ ತುತ್ತಾಗುತ್ತಿದ್ದಾರೆಂದು ಹೇಳಿದರು.

ಕಳೆದ ಬಜೆಟ್‌ನಲ್ಲಿ ಮುಖ್ಯಮಂತ್ರಿ ಅಡಿಕೆ ಮತ್ತು ತೆಂಗು ಬೆಳೆಯಲ್ಲಿ ಚುಕ್ಕೆ ರೋಗ ತಡೆಗೆ 65 ಕೋ.ರೂ ಮೀಸಲಿಟ್ಟಿದ್ದರು. ಅದರಲ್ಲಿ ಕೇವಲ 5 ಕೋ.ರೂ. ಮಾತ್ರ ಬಳಕೆಯಾಗಿದೆ. ರೋಗಗಳನ್ನು ಹತೋಟಿಗೆ ಪರೀಕ್ಷೆ ನಡೆಸಿ, ಔಷಧ, ಕೀಟನಾಶಕ ಪೂರೈಕೆಗೆ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದ್ದರು. ಆದರೂ ಯಾವುದೇ ಕ್ರಮ ಕೈಗೊಂಡಿಲ್ಲ, ತೆಂಗು ಬೆಳೆ ಉಳಿಸಲು ಕನಿಷ್ಠ 100 ಕೋ.ರೂ. ಅನುದಾನ ಒದಗಿಸಿ, ರೈತ ಸಂಪರ್ಕ ಕೇಂದ್ರಗಳ ಮೂಲಕ ಬೇಕಾದ ಔಷಧ ವಿತರಣೆಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಹೆದ್ದಾರಿಗಳು ಸಾವಿನ ದಾರಿಯಾಗದಿರಲಿ

ದೇಶದ ರಸ್ತೆ ಸಂಚಾರದ ಇತಿಹಾಸದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಅತ್ಯಂತ ಮಹತ್ವದ್ದಾಗಿದೆ. ರಾಷ್ಟ್ರೀಯ ಹೆದ್ದಾರಿಗಳ ಸಂಚಾರ ಪಥ (ಕ್ಯಾರೇಜ್ ವೇ) ಮತ್ತು ಪಕ್ಕದ ಪಾದಚಾರಿ ಮಾರ್ಗಗಳಲ್ಲಿ ಭಾರೀ ವಾಹನಗಳು ಮತ್ತು ವಾಣಿಜ್ಯ ವಾಹನಗಳ ನಿಲುಗಡೆಯನ್ನು ಸಂಪೂರ್ಣವಾಗಿ ನಿಷೇಧಿಸಿರುವ ನ್ಯಾಯಾಲಯದ ಕ್ರಮವು ಹೆದ್ದಾರಿ ಸುರಕ್ಷೆಯ ನಿಟ್ಟಿನಲ್ಲಿ ಹೊಸ ಭರವಸೆ ಮೂಡಿಸಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಹೇಶ್ವರಿ ಮತ್ತು ಅತುಲ್ ಚಂದೂರ್ಕರ್ ಅವರ ಪೀಠವು ಈ ತೀರ್ಪಿನಲ್ಲಿ ಒಂದು ಮಹತ್ವದ ಅಂಶವನ್ನು ಒತ್ತಿ ಹೇಳಿದೆ, ಸುರಕ್ಷಿತವಾಗಿ ಪ್ರಯಾಣಿಸುವುದು ಸಂವಿಧಾನದ 21ನೇ ವಿಧಿಯಡಿ ಪ್ರತಿಯೊಬ್ಬ ಪ್ರಜೆಯ ಬದುಕುವ ಹಕ್ಕಿನ ಅವಿಭಾಜ್ಯ ಅಂಗವಾಗಿದೆ. ಸರಕಾರಕ್ಕೆ ಕೇವಲ ರಸ್ತೆ ನಿರ್ಮಿಸುವ ಜವಾಬ್ದಾರಿ ಮಾತ್ರವಲ್ಲ, ಆ ರಸ್ತೆಯಲ್ಲಿ ಸಾರ್ವಜನಿಕರ ಜೀವ ರಕ್ಷಿಸುವ ಹೊಣೆಗಾರಿಕೆಯೂ ಇದೆ ಎಂದು ನ್ಯಾಯಾಲಯವು ನೆನಪಿಸಿಕೊಟ್ಟಿದೆ.

ನ್ಯಾಯಾಲಯವು ತನ್ನ ಮಧ್ಯಾಂತರ ನಿರ್ದೇಶನಗಳ ಮೂಲಕ ಯಾವುದೇ ಘನ ಅಥವಾ ವಾಣಿಜ್ಯ ವಾಹನಗಳನ್ನು ರಾಷ್ಟ್ರೀಯ ಹೆದ್ದಾರಿಯ ಕ್ಯಾರೇಜ್ ವೇ ಅಥವಾ ರಸ್ತೆಯ ಅಂಚಿನಲ್ಲಿ ನಿಲ್ಲಿಸುವಂತಿಲ್ಲ ಎಂದಿದೆ. ವಾಹನ ನಿಲ್ಲಿಸಲೇ ಬೇಕು ಎಂದಾಗಿದ್ದರೆ, ನಿಗದಿಪಡಿಸಿದ ಬೇ, ಲೇ ಬೈ ಅಥವಾ ರಸ್ತೆ ಬದಿಯ ನಿಗದಿತ ಪಾರ್ಕಿಂಗ್ ಸೌಕರ್ಯವುಳ್ಳ ಪ್ರದೇಶಗಳಲ್ಲಿಯೇ ನಿಲ್ಲಿಸಬೇಕು ಎಂದು ತಿಳಿಸಿದೆ.

ದೇಶದ ಒಟ್ಟು ರಸ್ತೆ ಜಾಲದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಪಾಲು ಕೇವಲ ಶೇ. 2 ಮಾತ್ರ. ಆದರೆ ದೇಶದಲ್ಲಿ ಸಂಭವಿಸುವ ಒಟ್ಟು ರಸ್ತೆ ಅಪಘಾತಗಳ ಸಾವುಗಳಲ್ಲಿ ಶೇ. 30ರಷ್ಟು ಈ ಹೆದ್ದಾರಿಗಳಲ್ಲೇ ನಡೆಯುತ್ತಿರುವುದು ಆಘಾತಕಾರಿ ವಿಷಯ. ರಾಜಸ್ಥಾನದ ಫಲೋಡಿ ಮತ್ತು ತೆಲಂಗಾಣದಲ್ಲಿ ಸಂಭವಿಸಿದ ಭೀಕರ ಅಪಘಾತಗಳಲ್ಲಿ 34 ಮಂದಿ ಜೀವ ಕಳೆದುಕೊಂಡಿದ್ದರು. ಈ ಪ್ರಕರಣಗಳನ್ನು ಸ್ವಯಂ ಪ್ರೇರಿತವಾಗಿ ಕೈಗೆತ್ತಿಕೊಂಡ ನ್ಯಾಯಾಲಯವು, ಹೆದ್ದಾರಿಗಳನ್ನು ಅಪಾಯದ ಕಾರಿಡಾರ್‌ಗಳು ಎಂದು ಕರೆದಿದೆ. ಕೇವಲ ಆದೇಶ ನೀಡಿದರೆ ಸಾಲದು, ಅದರ ಜಾರಿಗೆ ತಂತ್ರಜ್ಞಾನದ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಅಡ್ವಾನ್ಸ್ಡ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಅಡಿಯಲ್ಲಿ ನೈಜ ಸಮಯದ ಎಚ್ಚರಿಕೆಗಳು ಜಿಪಿಎಸ್ ಆಧಾರಿತ ಫೋಟೋ ಸಾಕ್ಷ್ಯಗಳ ಮೂಲಕ ಅಕ್ರಮ ನಿಲುಗಡೆ ಪತ್ತೆ ಹಚ್ಚುವುದು ಇದರಲ್ಲಿ ಸೇರಿದೆ. ಇನ್ನೊಂದು ಇ-ಚಲನ್ ವ್ಯವಸ್ಥೆ ಇದರಲ್ಲಿ ನಿಯಮ ಉಲ್ಲಂಘಿಸುವವರಿಗೆ ಕೂಡಲೇ ದಂಡ ವಿಧಿಸುವುದು. ಜತೆಗೆ ಅಕ್ರಮ ಡಾಬಾಗಳನ್ನು ತೆರವು ಮಾಡಬೇಕೆಂದು ಹೇಳಿದೆ. ಹೆದ್ದಾರಿ ಬದಿಯ ಅನಧಿಕೃತ ಡಾಬಾಗಳು ಮತ್ತು ವಾಣಿಜ್ಯ ಮಳಿಗೆಗಳನ್ನು 60 ದಿನಗಳೊಳಗೆ ತೆರವುಗೊಳಿಸಲು ಆದೇಶಿಸಲಾಗಿದೆ.

ಲಾರಿ ಚಾಲಕರಿಗೆ ವಿಶ್ರಾಂತಿ ಪಡೆಯಲು ಪ್ರತೀ 75 ಕಿ.ಮೀ.ಗಳಿಗೆ ಒಮ್ಮೆ ಟ್ರಕ್ ಲೇ-ಬೈ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಕೋರ್ಟ್ ಸೂಚಿಸಿದೆ. ಇದು ಕೇವಲ ಹೆದ್ದಾರಿ ಬದಿ ವಾಹನ ನಿಲುಗಡೆಗೆ ನಿಷೇಧದ ತೀರ್ಪಲ್ಲ ಬದಲಾಗಿ ವ್ಯವಸ್ಥಿತ ಬದಲಾವಣೆಯ ಮುನ್ನುಡಿ.

ರಸ್ತೆ ಬದಿಯಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸುವ ಘನ ವಾಹನಗಳು, ಲಾರಿಗಳಿಗೆ ಢಿಕ್ಕಿ ಹೊಡೆದು ಅಮಾಯಕ ಜೀವಗಳು ಸಾವನ್ನಪ್ಪುವುದು ತಡೆಯಬಹುದಾದ ವಿಷಯ. ಆಡಳಿತಾತ್ಮಕ ಉದಾಸೀನ ಅಥವಾ ಹಣಕಾಸಿನ ಕೊರತೆಯನ್ನು ನೆಪವಾಗಿಟ್ಟುಕೊಂಡು ಜನರ ಜೀವದ ಜತೆ ಚೆಲ್ಲಾಟವಾಡಬಾರದು ಎಂಬ ನ್ಯಾಯಾಲಯದ ಎಚ್ಚರಿಕೆ ಸರಕಾರಗಳಿಗೆ ಪಾಠವಾಗಬೇಕಿದೆ. ಈ ಆದೇಶವು ಕಟ್ಟುನಿಟ್ಟಾಗಿ ಜಾರಿಯಾದಲ್ಲಿ ಮಾತ್ರ ನಮ್ಮ ಹೆದ್ದಾರಿಗಳು ನಿಜವಾದ ಅರ್ಥದಲ್ಲಿ ಪ್ರಗತಿಯ ಹಾದಿಯಾಗಬಲ್ಲವು.

ಲಿಂಬೆ ಬೇಸಾಯದಲ್ಲಿ ಸಸ್ಯ ಸಂರಕ್ಷಣೆ

ಲಿಂಬೆ ಹಣ್ಣು ಅಥವಾ ಕಾಯಿಗೆ ವರ್ಷವಿಡೀ ಬೇಡಿಕೆಯಿರುತ್ತದೆ. ಮಳೆಗಾಲದಲ್ಲಿ ಒಂದಿಷ್ಟು ಬೇಡಿಕೆ ಕಡಿಮೆ ಎಂದು ಅನಿಸಿದರೂ ಉತ್ತಮ ಮಾರುಕಟ್ಟೆ ಇದೆ. ಸ್ವಲ್ಪ ದರ ಕಡಿಮೆ ಇರುವಾಗ ಉಪ್ಪಿನಕಾಯಿ, ಸ್ಕ್ವಾಷ್ ಮೊದಲಾದುವುಗಳನ್ನು ತಯಾರಿಸಬಹುದು. ಇವು ಬಹುಕಾಲ ಕೆಡದೇ ಉಳಿಯುತ್ತವೆ. ಲಿಂಬೆ ಸಸ್ಯದ ಬೆಳವಣಿಗೆಯ ಸಮಯದಲ್ಲಿ ಕೃಷಿಕರು ಹಲವಾರು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಕೀಟಗಳು

ಲಿಂಬೆ ಪತಂಗ: ಲಿಂಬೆ ಪತಂಗದ ಮರಿಹುಳುಗಳು ಎಲೆಗಳ ಮೇಲೆ ಪಕ್ಷಿ ವಿಸರ್ಜಿಸಿದ ಮಲದಂತೆ ಕಾಣಿಸುತ್ತವೆ. ಮರಿಹುಳುಗಳು ಎಲೆಗಳನ್ನು ತಿಂದು ಹಾಳುಮಾಡುತ್ತವೆ.

ನಿರ್ವಹಣೆ: ಗಿಡದಲ್ಲಿ ಹೊಸ ಎಲೆಗಳು ಬಂದಾಗ 4 ಗ್ರಾಂ. ಕಾರ್ಬರಿಲ್ 50 ಡಬ್ಲ್ಯೂ.ಪಿ. ಅಥವಾ 1 ಮಿ.ಲೀ. ಬಿ.ಟಿ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದರಿಂದ ಈ ಕೀಟ ಬಾಧೆಯನ್ನು ತಡೆಗಟ್ಟಬಹುದು.

ಎಲೆಸುರಂಗ ಹುಳು: ಮರಿಹುಳುಗಳು ಎಲೆಗಳೊಳಗೆ ಕೆರೆದು ತಿನ್ನುವುದರಿಂದ ಎಲೆಗಳ ಮೇಲೆ ಬಿಳಿ ಹೂವಿನ ಆಕೃತಿಯ ಪಟ್ಟಿಗಳನ್ನುಂಟು ಮಾಡುತ್ತವೆ. ನಂತರ ಎಲೆಗಳು ಬಾಡಿ ಬೇಗ ಉದುರುತ್ತವೆ

ನಿರ್ವಹಣೆ: ಶೇ. 50 ಬೇವಿನ ಬೀಜದ ಕಷಾಯ ಅಥವಾ 0.5ಮಿ.ಲೀ. ಸೈಫರ್‌ಮೆಥಿನ್ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.

ಎಲೆ ತಿನ್ನುವ ಕೀಟ: ಮರಿಹುಳುಗಳು ಎಲೆಗಳನ್ನು ತಿಂದು ಹಾಳುಮಾಡುತ್ತವೆ. ಮೇಲಿನಂತೆ ನಿರ್ವಹಣೆ ಮಾಡಬೇಕು.

ಸಸ್ಯ ಹೇನು: ಕಪ್ಪು ಬಣ್ಣದ ಹೇನುಗಳು ಗುಂಪಿನಲ್ಲಿದ್ದು ಎಳೆಯದಾದ ರೆಂಬೆಗಳಿಂದ ರಸ ಹೀರುತ್ತವೆ. ಇಂತಹ ರೆಂಬೆಗಳು ಹಳದಿಯಾಗುತ್ತವೆ.

ನಿರ್ವಹಣೆ: ಪ್ರತಿ ಲೀಟರ್ ನೀರಿಗೆ 1.70ಮಿ.ಲೀ. ಡೈಮಿಥೋಯೆಟ್ 30 ಉಇ.ಸಿ. ಅಥವಾ 0.25 ಇಮಿಡಾಕ್ಲೋಪ್ರಿಡ್ ಬೆರೆಸಿ ಸಿಂಪಡಿಸಬೇಕು.

ಗೊಣ್ಣೆ ಹುಳು: ಬಿಳಿ ಇಂಗ್ಲಿಷ್ ಸಿ ಆಕಾರದ ಮರಿಹುಳುಗಳು ಬೇರುಗಳನ್ನು ತಿನ್ನುತ್ತವೆ. ಮರಗಳ ಎಲೆಗಳು ಮೊದಲು ಹಳದಿಯಾಗುತ್ತದೆ. ನಂತರ ಮರಗಳು ಒಣಗುತ್ತವೆ.

ನಿರ್ವಹಣೆ :

1) ಮುಂಗಾರು ಹಂಗಾಮಿನ ಮೊದಲ ಮಳೆ ಬಿದ್ದ ಕೂಡಲೇ ಆ ದಿನ ರಾತ್ರಿ 7-30 8-30ರ ವರೆಗೆ ದುಂಬಿಗಳನ್ನು ದೀಪದ ಬಲೆಗಳಿಗೆ ಆಕರ್ಷಿಸಿ ನಾಶಪಡಿಸಬೇಕು.

2) ಮುಂಗಾರು ಹಂಗಾಮಿನ ಮೊದಲ ಮಳೆ ಬಿದ್ದ ದಿನವೇ ಸಾಯಂಕಾಲ ಬೇವು, ಪೇರಳೆ ಮುಂತಾದ ಗಿಡಗಳ ಟೊಂಗೆಗಳಿಗೆ ಕೀಟನಾಶಕಗಳನ್ನು ಸಿಂಪಡಿಸಿ ಬದುಗಳ ಮೇಲೆ ನೆಡುವುದರಿಂದ ದುಂಬಿಗಳು ಆಕರ್ಷಿಸಲ್ಪಟ್ಟು ಸಾಯುತ್ತವೆ.

3) ಗಿಡದ ಬುಡಕ್ಕೆ ಮಣ್ಣಿನಲ್ಲಿ 10 ಮಿ.ಲೀ. ಕ್ಲೋರೋಪೈರಿಫಾಸ್ 20 ಇ.ಸಿ. ಪ್ರತಿ ಲೀ. ನೀರಿಗೆ ಬೆರೆಸಿ ಸುರಿಯಬೇಕು.

4) ಕೀಟಗಳಲ್ಲಿ ರೋಗ ತರಿಸುವ ಶಿಲೀಂಧ್ರಗಳನ್ನು ಮಣ್ಣಿಗೆ ಬೆರೆಸುವುದರಿಂದ ಕೂಡ ಗೊಣ್ಣೆ ಹುಳುಗಳನ್ನು ನಿರ್ವಹಿಸಬಹುದು.

ಹಿಟ್ಟು ತಿಗಣೆ, ಬಿಳಿನೊಣ, ಶಲ್ಕಕೀಟ: ಈ ಕೀಟಗಳು ಎಲೆಗಳಿಂದ ರಸ ಹೀರುತ್ತವೆ. ಎಲೆಗಳು ಹಳದಿಯಾಗಿ ಹೂ ಕಾಯಿಗಳು ಉದುರುತ್ತವೆ.

ನಿರ್ವಹಣೆ: ಮೀನು ಎಣ್ಣೆ ಸಾಬೂನಿನ ಜೊತೆಗೆ 4 ಗ್ರಾಂ. ಕಾರ್ಬರಿಲ್ ಶೇ. 50 ಡಬ್ಲ್ಯೂ.ಪಿ. ಅಥವಾ 2.0 ಮಿ.ಲೀ. ಕ್ವಿನಾಲ್‌ಫಾಸ್ 25 ಇಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಿರಿ. ಹತ್ತು ದಿನಗಳ ನಂತರ ಇದೇ ಸಿಂಪರಣೆಯನ್ನು ಪರಿವರ್ತಿಸಬೇಕು.

ಹಣ್ಣಿನ ಚಿಟ್ಟೆ: ಪತಂಗಗಳು ಹಣ್ಣಿನಿಂದ ರಸವನ್ನು ಹೀರುತ್ತವೆ. ಅಂತಹ ಹಣ್ಣುಗಳ ಮೇಲೆ ಕಪ್ಪು ಚುಕ್ಕೆಗಳಿರುತ್ತವೆ. ನಂತರ ಹಣ್ಣುಗಳು ಕೊಳೆಯುತ್ತವೆ ಮತ್ತು ಕೆಳಗೆ ಬೀಳುತ್ತವೆ. 4 ಗ್ರಾಂ. ಕಾರ್ಬಾರಿಲ್ 50 ಡಬ್ಲ್ಯೂ. ಪಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು. ಮರಿಗಳ ಆಹಾರ ಸಸ್ಯಗಳನ್ನು ನಿಯಂತ್ರಿಸಬೇಕು.

ಕಾಂಡ ಕೊರೆಯುವ ಹುಳು: ಕಾಂಡ ಕೊರಕ ಮರಿಗಳು, ರೆಂಬೆ ಮತ್ತು ಕಾಂಡಗಳನ್ನು ಕೊರೆದು ತಿನ್ನುತ್ತವೆ. ಅಂತಹ ರೆಂಬೆಗಳು ಮತ್ತು ಮರಗಳು ಒಣಗುತ್ತದೆ. ಕಾಂಡ ಕೊರೆಯುವ ಹುಳದ ಬಾಧೆಯನ್ನು ತಡೆಯಲು ಹುಳು ಕೊರೆದ ತೂತುಗಳಲ್ಲಿ ಡೈಕ್ಲೋರೋಫಾಸ್ ಹನಿ ಹಾಕಿ ಹಸಿ ಮಣ್ಣಿನಿಂದ ತೂತುಗಳನ್ನು ಮುಚ್ಚಬೇಕು.

ಜೇಡನುಸಿ: ನುಶಿಗಳು ಎಲೆಗಳ ಕೆಳಭಾಗದಿಂದ ರಸ ಹೀರುತ್ತವೆ. ಎಲೆಗಳ ಮೇಲೆ ಬಿಳಿ ಚುಕ್ಕೆಗಳನ್ನು ಕಾಣಬಹುದು. ನಿರ್ವಹಣೆ: ಪ್ರತಿ ಲೀಟರ್ ನೀರಿನಲ್ಲಿ 2.5 ಮಿ.ಲೀ. ಡಿಕೋಫಾಲ್ 20 ಇ.ಸಿ. ಬೆರೆಸಿ ಸಿಂಪರಣೆ ಮಾಡಬೇಕು.

ರೋಗಗಳು

ಕಜ್ಜಿ ರೋಗ: ಎಲೆಗಳು ಹಾಗೂ ಹಣ್ಣುಗಳ ಮೇಲೆ ಕಜ್ಜಿ ತರಹದ ಚುಕ್ಕೆಗಳು ಕಂಡು ಬಂದು ಎಲೆ ಒಣಗಿ ಉದುರುತ್ತವೆ. ಹಾಗೂ ಹಣ್ಣುಗಳು ಕೊಳೆಯುತ್ತವೆ. ರೋಗ ತಗುಲಿನ ಭಾಗಗಳನ್ನು ಕತ್ತರಿಸಿದ ಮೇಲೆ ಪ್ರತಿ ಲೀಟರ್ ನೀರಿಗೆ 3 ಗ್ರಾಂ. ತಾಮ್ರದ ಆಕ್ಸಿಕ್ಲೋರೈಡ್ ಶೇ. 50 ಡಬ್ಲ್ಯೂ ಪಿ ಹಾಗೂ 0.5 ಗ್ರಾಂ. ಸ್ಟ್ರೆಪ್ಟೋಮೈಸಿನ್ ಸಲ್ಫೇಟ್ ಅಥವಾ ಶೇ. 1ರ ಬೋರ್ಡೋ ದ್ರಾವಣ ಸಿಂಪಡಿಸಬೇಕು. ಅವಶ್ಯವಿದ್ದಲ್ಲಿ ಮತ್ತೆ ಇದೇ ಸಿಂಪರಣೆಯನ್ನು ಪುನರಾವರ್ತಿಬೇಕು.

ಕಾಂಡ ಒಣಗುವ ರೋಗ: ರೆಂಬೆಗಳು ಒಣಗಿ ಗಿಡವೆಲ್ಲಾ ಸೊರಗುತ್ತದೆ. ಒಣಗಿದ ರೆಂಬೆಗಳನ್ನು ಕತ್ತರಿಸಿ ಗಿಡಗಳಿಗೆ ಶೇ. 50ರ 3 ಗ್ರಾಂ. ತಾಮ್ರದ ಆಕ್ಸಿಕ್ಲೋರೈಡ್ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಟ್ರಿಸ್ಟೇಜಾ ನಂಜು ರೋಗ: ಎಲೆಗಳು ಮುದುಡುತ್ತವೆ. ಕಾಂಡದಲ್ಲಿ ರಂಧ್ರಗಳಾಗುತ್ತವೆ ಹಾಗೂ ತೊಗಟೆಯ ಒಳಭಾಗದಲ್ಲಿ ಜೇನು ಗೂಡಿನಂತಹ ಚಿತ್ತಾರ ಕಂಡು ಬಂದು ಗಿಡಗಳು ಒಮ್ಮೆಲೇ ಒಣಗಿ ಸಾಯುತ್ತವೆ.

ನಿರ್ವಹಣೆ: ತೀವ್ರ ಬಾಧೆಗೊಳಗಾದ ಗಿಡಗಳನ್ನು ನಾಶಪಡಿಸಬೇಕು. ರೋಗದ ಹತೋಟಿಗಾಗಿ ಮೊದಲೇ ಅವಶ್ಯ ವೈರಸ್‌ಗಳಿಂದ ನಿರೋಧಕ ಚುಚ್ಚುಮದ್ದು ಹಾಕಿದ ಸಸಿಗಳನ್ನೇ ನಾಟಿಗಾಗಿ ಉಪಯೋಗಿಸಬೇಕು.

ಬೂದು ರೋಗ: ಎಲೆ ಹಾಗೂ ಎಳೆಯ ಟೊಂಗೆಗಳ ಮೇಲೆ ಬೂದು ತರಹದ ಶಿಲೀಂಧ್ರ ಬೆಳವಣಿಗೆ ಕಂಡುಬಂದು ಎಲೆಗಳು ಅಪಕ್ವವಾಗಿ ಉದುರುತ್ತವೆ.

ನಿರ್ವಹಣೆ: 3 ಗ್ರಾಂ. ನೀರಿನಲ್ಲಿ ಕರುವ ಗಂಧಕ ಶೇ. 50 ಅಥವಾ 1 ಗ್ರಾಂ. ಕಾರ್ಬೆನ್‌ಡೈಜಿಮ್ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು. ಅವಶ್ಯವಿದ್ದಲ್ಲಿ ಸಿಂಪರಣೆಯನ್ನು ಪುನಃ ಮಾಡಬೇಕು.

ಕಳೆ ನಿರ್ವಹಣೆ: ಲಿಂಬೆ ಸಸಿ ಇರುವಾಗ ಜಾಗರೂಕತೆಯಲ್ಲಿ ಡೈಯುರಾನ್ ಕಳೆನಾಶಕ ಸಿಂಪಡಿಸಿರಿ. ಲಿಂಬೆ ಸಸ್ಯವನ್ನು ಹಿತ ಮಿತವಾಗಿ ಪ್ರೂನಿಂಗ್ ಮಾಡಿ ಇಳುವರಿ ಹೆಚ್ಚಿಸಿಕೊಳ್ಳಬಹುದು. ಹೊಸ ಚಿಗುರುಗಳಲ್ಲಿ ಹೂವು, ಹೆಚ್ಚು ಬಂದು ಕಾಯಿ ಪುಷ್ಟಿಯಾಗಿರುತ್ತದೆ.

ಕೊಯ್ಲು ಮತ್ತು ಇಳುವರಿ

ಲಿಂಬೆ ಸಸಿಗಳು ನಾಟಿ ಮಾಡಿದ 2ನೇ ವರ್ಷದಿಂದ ಇಳುವರಿ ಪ್ರಾರಂಭವಾಗುತ್ತದೆ. ಲಿಂಬೆ ಹಣ್ಣುಗಳು ಹೂಬಿಟ್ಟ 6 ತಿಂಗಳ ನಂತರ ಕೊಯ್ಲಿಗೆ ಬರುತ್ತವೆ. ವರ್ಷದಲ್ಲಿ 2 ಬಾರಿ ಅಂದರೆ ಜುಲೈ-ಸಪ್ಟೆಂಬರ್ ಮತ್ತು ಮಾರ್ಚ್-ಜೂನ್ ತಿಂಗಳುಗಳಲ್ಲಿ ಬೆಳೆ ಕೊಯ್ಲಿಗೆ ಬರುತ್ತದೆ. ಸುಮಾರು 8 ವರ್ಷದ ಲಿಂಬೆ ಗಿಡದಿಂದ 1000-1200 ಹಣ್ಣುಗಳನ್ನು (25 ಟನ್ ಪ್ರತಿ ಹೆಕ್ಟೇರಿಗೆ) ಮತ್ತು ಇಟಾಲಿಯನ್ ಮತ್ತು ಇತರ ಗಜನಿಂಬೆಯಿಂದ 600-800 ನಿಂಬೆಗಳನ್ನು ಪ್ರತಿ ಗಿಡದಿಂದ ಪ್ರತಿ ವರ್ಷ ನಿರೀಕ್ಷಿಸಬಹುದು. ಇಟಾಲಿಯನ್ ಲಿಂಬೆ, ಗಜಲಿಂಬೆ ಮುಂತಾದವುಗಳನ್ನು ರಸ ತೆಗೆಯುವವರಿಗೂ, ಉಪ್ಪಿನ ಕಾಯಿ ತಯಾರಕರಿಗೂ ಔಷಧಿ ತಯಾರಕರಿಗೂ ಮಾರಾಟ ಮಾಡಬೇಕು. ಇದರಲ್ಲಿ ರಸ ಉತ್ತಮವಾಗಿ ಇರುತ್ತದೆಯಾದರೂ ರಸ ನಿಂಬೆಯಂತೆ ಅದನ್ನು ಕೈಯಲ್ಲಿ ಹಿಂಡಿ ತೆಗೆಯಲು ಕಷ್ಟವಾಗುತ್ತದೆ. ಇದರ ರಸ ತೆಗೆಯುವ ಸಾಧನಗಳಿದ್ದು, ಅದರಲ್ಲಿ ಗರಿಷ್ಟ ರಸ ತೆಗೆಯಲಿಕ್ಕಾಗುತ್ತದೆ.

- ರಾಧಾಕೃಷ್ಣ ಹೊಳ್ಳ

ಧರ್ಮಕ್ಷೇತ್ರ - ಕುರುಕ್ಷೇತ್ರ

ಶ್ರೀಮದ್ಭಗವದ್ಗೀತೆಯ ಮೊದಲ ಶ್ಲೋಕ ಧರ್ಮ ಕ್ಷೇತ್ರೇ ಕುರುಕ್ಷೇತ್ರೇ ಎಂದಾರಂಭವಾಗುತ್ತದೆ. ಕೌರವ ಪಾಂಡವರ ಸೈನ್ಯದ ನಡುವೆ ಧರ್ಮಯುದ್ಧ ನಡೆಯುತ್ತಿರುವುದರಿಂದ ಯುದ್ಧ ಭೂಮಿ ಯಾಗಿದ್ದ ಕುರುಕ್ಷೇತ್ರವು ಧರ್ಮ ಕ್ಷೇತ್ರವಾಗಿದೆ. ಮಾನವನ ದೇಹವನ್ನು ಧರ್ಮಕ್ಷೇತ್ರ ಎಂದು ಭಾವಿಸುವುದು ಅಸಮಂಜಸವಲ್ಲ. ಈ ದೇಹವು ದೇವಾಲಯದಂತೆ ಪುಣ್ಯಕ್ಷೇತ್ರ. ದೇಹೋ ದೇವಾಲಯಃ ಪ್ರೋಕ್ತೋ ದೇವೋ ಜೀವಃ ಸನಾತನಃ ಈ ದೇಹದೊಳಗೆ ಆತ್ಮ ಅಥವಾ ಜೀವ ಸ್ವರೂಪಿಯಾದ ಭಗವಂತ ನೆಲೆಸಿದ್ದಾನೆ ಎಂಬುದು ಭಾರತೀಯರ ನಂಬುಗೆ. ನಂಬುಗೆಯೂ ಮೂಢ ವಲ್ಲ. ಅಪಾರವಾದ ಶಕ್ತಿಯು ಈ ದೇಹಕ್ಕಿದೆ. ಈ ದೇಹ ಸೃಷ್ಟಿ ಸ್ಥಿತಿ ಲಯಕರ್ತನ ಕೆಲಸವನ್ನು ನಿರ್ವಹಿಸುತ್ತದೆ. ಭಗವತ್ ಪ್ರೇರಿತವಾಗಿರುವ ಶಕ್ತಿಯದು. ದೇಹವೆಂಬ ಈ ಧರ್ಮಕ್ಷೇತ್ರದಲ್ಲಿ ಕುರುಕ್ಷೇತ್ರ ದಂತೆ ಯುದ್ಧವೂ ನಡೆಯುತ್ತಿದೆಯೇ? ಹೌದು. ದೇಹವೆಂಬ ಧರ್ಮಕ್ಷೇತ್ರ ಸದಾ ಯುದ್ಧದ ಸನ್ನಿವೇಶಗಳಿಂದ ತುಂಬಿರುತ್ತದೆ. ಹೃದಯದೊಳಗಿನ ಕುರುಕ್ಷೇತ್ರಕ್ಕೆ ಕಾರಣಗಳೇನು? ಕಾರಣರು ಯಾರು? ಎಂಬ ಪ್ರಶ್ನೆ ಸಹಜ. ಹುಟ್ಟುವ ಗಿಡ ಎಷ್ಟು ಸುಂದರವಾಗಿರುತ್ತದೆ ಅಲ್ಲವೇ? ಯಾವುದೇ ಕಲೆ ಮತ್ತು ಕಳೆಯಿರದ ಗಿಡಕ್ಕೆ ಪರಿಸರದ ಕ್ರಿಮಿ ಕೀಟಗಳ ಹಾವಳಿಯಿಂದ ಅದು ನಾಶಹೊಂದುವುದು. ಅದೇ ರೀತಿ ಹುಟ್ಟಿನಿಂದ ಪರಿಶುದ್ಧವಾಗಿರುವ ಮನಸ್ಸಿನ ಕಲೆ, ಕೊಳೆ, ಮಾಲಿನ್ಯಗಳಿಗೆ ಪರಿಸರವೇ ಕಾರಣ. ಪರಿಸರವೆಂದರೆ ಗಿಡ ಮರ ಬಳ್ಳಿಗಳು ಮಾತ್ರವೇ? ಖಂಡಿತಾ ಅಲ್ಲ, ಪರಿಸರದಲ್ಲಿ ಕಾಣುವ ಸ್ವಾರ್ಥ ಮತ್ತು ಸಂಕುಚಿತ ಸ್ವಭಾವಗಳೂ ಮನಸ್ಸಿನೊಳಗೆ ಕಶ್ಮಲ ತುಂಬಲು ಕಾರಣ. ಸ್ವಭಾವಗಳು ಧನಾತ್ಮಕವಾಗಿದ್ದಾಗ ಆತ ಯಾ ಆಕೆ ಮನೋ ಶುದ್ಧರು. ಋಣಾತ್ಮಕ ಸೂಚನೆಗಳು, ಸಲಹೆಗಳು, ದೃಶ್ಯಗಳು. ಆಹಾರ ವಿಹಾರ ಪಾನೀಯಗಳು ಮನುಷ್ಯನ ಮನಸನ್ನು ಕೆಡಿಸುತ್ತವೆ. ಮನೆಗೆ ದೇಣಿಗೆ ಕೇಳಲು ಬಂದಾಗ ತಂದೆ ಯಾದವನು ಮನೆಯೊಳಗೆ ಅಡಗಿದ್ದು ಮಕ್ಕಳ ಮೂಲಕ ತಂದೆಯಿಲ್ಲ ಎಂದು ಹೇಳಿಸಿದರೆ ಆ ಮಕ್ಕಳ ಮನದೊಳಗೆ ಸಂಶಯದ ಬುಗ್ಗೆ ಏಳುತ್ತದೆ. ಧೂಮಪಾನ ಆರೋಗ್ಯಕ್ಕೆ ಹಾಳೆಂದು ಭಾಷಣ ಮಾಡುವ ಅಧ್ಯಾಪಕ ಮನೆಯಲ್ಲಿ ಸಿಗರೇಟು ಸೇದುವುದನ್ನು ಗಮನಿಸಿದ ವಿದ್ಯಾರ್ಥಿಗಳ ಮನದೊಳಗೆ ಸಂಶಯ ಚಿಗುರುತ್ತದೆ. ಆಗ ತಾನೇ ಕರೆದು ತಂದ ಹಾಲಿಗೆ ತಾಯಿ ನೀರು ಬೆರೆಸಿ ನೆರೆ ಮನೆಗೆ ಮಾರಿದುದನ್ನು ನೋಡಿದ ಮಗ ಅಥವಾ ಮಗಳ ಮನದೊಳಗೆ ತಾಯಿಯ ಬಗ್ಗೆ ಅವಳ ಕಾರ್ಯದ ಬಗ್ಗೆ ಎಂತಹ ಭಾವನೆ ಉದಯಿಸಬಹುದು? ಇಂತಹ ಹಲವಾರು ಸಂದರ್ಭಗಳು ಹೃದಯದೊಳಗೆ ಸಂಶಯಗಳನ್ನು ಸೃಷ್ಟಿಸಿ ಕುರುಕ್ಷೇತ್ರ ಕದನ ನಡೆಯುತ್ತದೆ. ಈ ಕದನ ಸಂಶಯಾತ್ಮಾ ವಿನಶ್ಯತಿ ಎಂಬ ಮಾತಿನಂತೆ ಆತ್ಮ ನಾಶಕ್ಕೆ ಕಾರಣವಾಗುತ್ತದೆ. ನಾಶವಾದ ಆತ್ಮದ ಸ್ಥಾನದಲ್ಲಿ ದುರಾತ್ಮ ಬಂದು ನೆಲೆಸುತ್ತದೆ. ದುರಾತ್ಮದಿಂದಾಗಿ ಮಾನವನು ದುರುಳನೋ ದುಷ್ಟನೋ ಆಗುವುದು ಸಹಜ. ಒಂದು ಮನೆಯಲ್ಲಿ ಗಂಡನು ಹೆಂಡತಿಗೆ ಕೇಳಿದ, ನಾಳೆ ಬೆಳಗ್ಗೆ ಮಸಾಲೆ ದೋಸೆ ಮಾಡ್ತಿಯಾ? ತಿನ್ನಲು ಬಹಳ ಆಸೆಯಿದೆ. ಆಗ ಹೆಂಡತಿ ಹೀಗೆ ಹೇಳಿದರೆ ಶುರುವಾಯಿತು ಇವರದ್ದೊಂದು! ಏನೂ ತಿಂಡಿ ಮಾಡಿ ಕೊಡದವರ ಹಾಗೆ, ಏನೂ ತಿನ್ನದವರ ಹಾಗೆ ಮಾತನಾಡುತ್ತಾರೆ, ಸಿಕ್ಕಿಸಿಕ್ಕಿದ್ದು ತಿನ್ನುವ ಬಾಯಿ ಚಪಲ, ಅದೂ ಒಂದು ಕೇಡು ಹೀಗೆ ರಾಗ ಎಳೆ ಯುವುದನ್ನು ಆಲಿಸುವ ಮಕ್ಕಳ ಮನದೊಳಗೆ ಹುಟ್ಟುವ ಭಾವನೆ ಸಕಾರಾತ್ಮಕವೋ ನಕಾರಾತ್ಮ ಕವೋ? ಮಕ್ಕಳ ಮನದೊಳಗೆ ಬಿತ್ತುವ ಎಲ್ಲಾ ಸಂಶಯದ ಅಥವಾ ನಕಾರಾತ್ಮಕ ಬೀಜಗಳು ಅಲ್ಲಿ ಮೊಳಕೆಯೊಡೆದು ಬಲಿತು ಹೆಮ್ಮರವಾಗಿ ಆತನನ್ನು ದುರಾತ್ಮನನ್ನಾಗಿ ಮಾಡಬಹುದು. ಮಗುವು ದುರಂತಗಳ ಬಲಿಪಶುವಾಗಿ ಅತ್ಯಂತ ಕೆಳ ಹಂತಕ್ಕೆ ಕುಸಿಯಬಹುದು. ಆದುದರಿಂದ ಮಕ್ಕಳ ಮನಸ್ಸು ಕುರುಕ್ಷೇತ್ರವಾಗದೇ ಧರ್ಮಕ್ಷೇತ್ರವೇ ಆಗಿ ಬೆಳಗುತ್ತಿರಲು ಎಲ್ಲ ಮನಸ್ಸುಗಳೂ ಯೋಚಿಸಬೇಕು.

- ರಮೇಶ ಎಂ. ಬಾಯಾರು, ಬಂಟ್ವಾಳ

ಇದ್ದಂಗೆ ಇರೋದಿಲ್ಲ!

ಇಂದು ಈ ಜಗತ್ತಿನ ವಸ್ತು ಮತ್ತು ವ್ಯಕ್ತಿಗಳ ಸ್ವರೂಪದ ಬಗ್ಗೆ ತಿಳಿದುಕೊಳ್ಳೋಣ. ಈ ಜಗತ್ತಿನ ಯಾವುದೇ ವಸ್ತು, ಜೀವಿ ಯಾವುದೇ ಆಗಲಿ, ಅದು ಇದ್ದ ಹಾಗೆ ಇರುವುದಿಲ್ಲ. ಉದಾಹರಣೆಗೆ : ನಮಗೆ ಒಂದೆರಡು ಬಿಳಿ ಕೂದಲು ಬಂದಿತೆಂದರೆ ಕಿತ್ತು ಹಾಕುತ್ತೇವೆ. ಆ ಬಿಳಿ ಕೂದಲು ನಮ್ಮವೇ, ಬೇರೆಯವರದಲ್ಲ, ನಮ್ಮ ತಲೆಯ ಮೇಲೆ ನಮ್ಮ ಅನ್ನ ಉಂಡು, ನಮ್ಮ ರಸ ಹೀರಿ, ಬೆಳೆದಂತಹ ಎರಡು ಕೂದಲು ಸ್ವಲ್ಪ ಬಣ್ಣ ಬದಲಾದರೆ ನಮಗೆ ಸೇರುವುದಿಲ್ಲ. ಏಕೆ? ನಮಗೆ ಕರಿ ಕೂದಲ ಮೇಲೆ ಬಹಳ ಮೋಹ ಆಗಿರುತ್ತದೆ. ನಾವು ಭಾವಿಸುವುದೇನೆಂದರೆ ಈ ಕಪ್ಪು ಕೂದಲು ನೂರು ವರ್ಷ ಹೀಗೆ ಇರಬೇಕೆಂದು. ಹಾಗಾಗಿ ಆ ಬಿಳಿ ಕೂದಲನ್ನು ತೆಗೆದು ಹಾಕುತ್ತಾ, ತೆಗೆದು ಹಾಕುತ್ತಾ ಹೋಗುತ್ತೇವೆ. ಮತ್ತೆ ಬಿಳಿ ಕೂದಲು ಬರುತ್ತದೆ, ಏನು ಮಾಡೋದಕ್ಕೆ ಆಗುತ್ತದೆ? ಅದಕ್ಕೆ ಮನುಷ್ಯ ಏನು ಮಾಡುತ್ತಾನೆಂದರೆ ಅದಕ್ಕೆ ಬಣ್ಣ ಹಚ್ಚಿಕೊಂಡು ಹೋಗುತ್ತಾನೆ. ಇದು ಜನಕ್ಕೆ ಗೊತ್ತಾಗಬಾರದು ಎಂದು ಹೀಗೆ ಮಾಡುತ್ತಾನೆ. ಆದರೆ ಇದು ಎಲ್ಲರಿಗೂ ಗೊತ್ತಿದೆ. ಈತ ಬಣ್ಣ ಹಾಕಿದ್ದಾನೆ ಎಂದು ಎಲ್ಲರಿಗೂ ಗೊತ್ತಿದೆ. 40, 50 ವರ್ಷ ಆದ ಮೇಲೆ ಕೂದಲು ಬೆಳ್ಳಗಾಗುತ್ತದೆ ಅಂತ ಜಗತ್ತಿಗೆ ಗೊತ್ತಿದ್ದರೂ, ಈ ರೀತಿ ಮುಚ್ಚೊ ಹವ್ಯಾಸ ಇದಿಯಲ್ಲ ಅದು ಇದ್ದ ಹಾಗೆ ಇರಬೇಕು ಅಂತ. ಇದು ಆಗೋದೇ ಬಣ್ಣ ಹಾಕಬಾರದು ಅಂತಲ್ಲ. ಈ ತಲೆ ಕೂದಲು ಒಂದಲ್ಲ ಒಂದು ದಿನ ಬೆಳ್ಳಗಾಗುತ್ತದೆ ಅಂತ ಮೊದಲೇ ತಿಳಿದುಕೊಂಡಿದ್ದರೆ. ಏನು ಆಗುವುದಿಲ್ಲ. ಮೊದಲೇ ತಿಳಿದು ಕೊಂಡಿದ್ದರೆ ಬೆಳ್ಳಗಾದರೇನು? ಕೆಂಪಗಾದ ರೇನು? ಆರಾಮಾಗಿ ಇರುತ್ತೇವೆ. ಹಾಗೆ ನಾವು, ಯಾವ ಯಾವುದನ್ನು ಬಯಸುತ್ತೇವೆ? ಅವು ಹೀಗೆ ಬದಲಾಗುತ್ತೆ ಅಂತ ತಿಳಿದು, ಪ್ರೇಮ ಮಾಡಿದರೆ ಆರಾಮ ಇರುತ್ತದೆ.

ಮದುವೆಯಾಗುವಾಗ ಹೇಳುತ್ತಾರೆ, ಏಳು ಜನ್ಮ ನೀವೇ ಸತಿಪತಿ ಅಂತ. ಇದನ್ನು ಕೇಳಿದರೆ ಹುಚ್ಚು ಆಗದೆ ಇರುತ್ತದೆ ಏನು. ಯಾವ ಸಂಬಂಧವೂ ಕಾಯಂ ಅಲ್ಲ. ದೇಹ ಸಂಬಂಧ ಇರಲಿ, ಮಾನಸಿಕ ಸಂಬಂಧವೇ ಇರಲಿ ಕಾಯಂ ಅಲ್ಲ. ಪತಿ-ಪತ್ನಿ, ತಂದೆ-ಮಗ, ಗುರು-ಶಿಷ್ಯ, ಯಾವುದೂ ಕೂಡ ಕಾಯಂ ಇಲ್ಲ. ಆ ಎಲ್ಲಾ ಸಂಬಂಧಗಳು ಹೊಯ್ದಾಡುತ್ತವೆ. ಸಂಬಂಧಗಳೆ ಹೊಯ್ದಾಡುವುದರಿಂದ ಇವುಗಳಿಂದ ಶಾಂತಿ ಪಡೆಯಲು ಯತ್ನಿಸಿದರೆ ಸಮಾಧಾನ ಸಿಗುವುದಿಲ್ಲ. ಸಂಬಂಧ ಗಳು ದೂರ ಆಗುವುದೇ ಅಂತ ತಿಳಿದುಬಿಟ್ಟರೆ, ಸಮಾಧಾನ ಆಗುತ್ತದೆ. ಜನ ಒಮ್ಮೆ ಹೊಗಳುತ್ತಾರೆ ಒಮ್ಮೆ ಬಯ್ಯುತ್ತಾರೆ. ಇದನ್ನು ತಿಳಿದುಕೊಂಡು ಬಿಟ್ಟರೆ ಬದುಕು ಆರಾಮ ಇರುತ್ತದೆ. ಹೊಗಳಿದಾಗಲೂ ಆರಾಮ. ತೆಗಳಿದಾಗಲೂ ಆರಾಮ ಇರುತ್ತದೆ. ಅದಕ್ಕೆ ಒಂದು ಸೂತ್ರ ಇದ್ದಂಗೆ ಇರುವುದಿಲ್ಲ, ನಾವು ಈಗ ಇರುವಂತೆ ಇರುವುದಿಲ್ಲ, ಯಾರಾದರೂ ಸಹಿತ ಹಾಗೇ ಇರುವುದಿಲ್ಲ, ಏನಾದರೂ ಕೂಡ ಹಾಗೇ ಇರುವುದಿಲ್ಲ. ಇದನ್ನು ತಲೆಗೆ ಹಾಕಿಕೊಂಡು ವ್ಯಾಪಾರ ಮಾಡಿ, ಉದ್ಯೋಗ ಮಾಡಿ, ಏನಾದರೂ ಮಾಡಿ ಆರಾಮಾಗಿ ಇರುತ್ತದೆ. ಆರಾಮ ಇರಬೇಕಾದರೆ ತಿಳಿದುಕೊಳ್ಳಬೇಕು. ಇದ್ದಂಗೆ ಇರುವುದಿಲ್ಲ. ಜಗತ್ತೇ ಪಾಠ ಕಲಿಸುತ್ತದೆ. ಜಗತ್ತೇ ಒಂದು ಪುಸ್ತಕ. ಮನುಷ್ಯ ಕಲಿಯಲಿ ಅಂತ ದಿನ ಒಂದೊಂದು ಪುಟವನ್ನು ಜಗತ್ತು ತೋರಿಸುತ್ತಾ ಇದೆ. ಕೆಲಸಕ್ಕೆ ಸೇರಿ ಮೊದಲ ಸಹಿ ಹಾಕುವಾಗಲೇ ಹೇಳಿಕೊಳ್ಳಬೇಕು... ಈ ಕುರ್ಚಿ, ಈ ವೈಭವ ಇದ್ದಂಗೆ ಇರುವುದಿಲ್ಲ. ಇಡೀ ಇತಿಹಾಸ ನೋಡಿ. ಸಮಸ್ತ ಜಗತ್ತಿನ ಇತಿಹಾಸ ನೋಡಿ.

ಇತಿಹಾಸ ಎಂದರೇನು?...ಇದ್ದಂಗೆ ಇರುವುದಿಲ್ಲ. ವಿಜಯ ನಗರ ಅರಸರ ಕಾಲದಂತೆ ಈಗಿಲ್ಲ. ಇಂದಿನಂತೆ ನಾಳೆ ಇರುವುದಿಲ್ಲ. ಬೆಳಗಿನಂತೆ ಮಧ್ಯಾಹ್ನ ಇರುವುದಿಲ್ಲ. ಮಧ್ಯಾಹ್ನದಂತೆ ಸಂಜೆ ಇಲ್ಲ. ಸಂಜೆಯಂತೆ ರಾತ್ರಿ ಇಲ್ಲ. ಯಾರಾದರೂ, ಏನಾದರೂ, ಹೀಗೂ ಅನ್ನುತ್ತಾರೆ, ಹಾಗೂ ಅನ್ನುತ್ತಾರೆ. ಇದ್ದ ಹಾಗೆ ಅವರೇ ಇಲ್ಲ ಅಂದಮೇಲೆ ಅವರ ಮಾತಿಗೆ ಬೆಲೆ ಕೊಡಬೇಕಾಗಿಲ್ಲ ಅನ್ನುವ ಭಾವ ಬರುತ್ತದೆ.

ಗವಿಸಿದ್ದೇಶ್ವರ ಸ್ವಾಮೀಜಿ ಹೇಳಿದ್ದು ಬಯಸಿದ್ದು ಸಿಗೋದಿಲ್ಲ, ಸಿಕ್ಕಿದ್ದು ಕಾಯಂ ಇರುವುದಿಲ್ಲ. ಇದರ ಅರ್ಥ ಬಯಸುತ್ತಾ ಕೊರಬೇಡ. ಸಿಕ್ಕಿದಾಗಲೇ ಅನುಭವಿಸು. ಸಿಕ್ಕಿದ್ದು ಇದ್ದಂಗೆ ಇರುವುದಿಲ್ಲ. ಈ ಸೂತ್ರ ಸುಂದರ ಬದುಕಿನ ಸೂತ್ರ. ಅಲ್ಲವೇ?

- ಎಂ.ಪಿ. ಜ್ಞಾನೇಶ್, ಮಂಗಳೂರು

ಭರವಸೆ ಮೂಡಿಸಿದ ತೀರ್ಪುಗಳು

ನಮ್ಮ ಸಮಾಜದಲ್ಲಿ ಅಪರಾಧ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅವುಗಳ ಪೈಕಿ ಕೊಲೆ ಪಾತಕ ಕೃತ್ಯ, ಆಸ್ತಿ ಕಲಹ, ದಾಂಪತ್ಯ ಕಲಹ ಹೀಗೆ ಜಟಿಲಗೊಂಡ ನಾನಾ ಪ್ರಕರಣಗಳು ಕೋರ್ಟ್ ಕಟಕಟೆಯಲ್ಲಿ ಇನ್ನೂ ಕೊಳೆಯುತ್ತಿವೆ. ಇನ್ನು ನಮ್ಮ ದೇಶದಲ್ಲಿ, ನ್ಯಾಯಾಂಗ ವ್ಯವಸ್ಥೆಯಲ್ಲಿ ಲಕ್ಷಾಂತರ ಪ್ರಕರಣಗಳು ಇನ್ನೂ ವಿಲೇವಾರಿಯಾಗದೇ ಬಾಕಿ ಉಳಿದಿವೆ.

ಪ್ರಸ್ತುತ ನಮ್ಮ ಸಮಾಜದಲ್ಲಿ ಅಪರಾಧ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅವುಗಳ ಪೈಕಿ ಕೊಲೆ ಪಾತಕ ಕೃತ್ಯ, ಆಸ್ತಿ ಕಲಹ, ದಾಂಪತ್ಯ ಕಲಹ ಹೀಗೆ ಜಟಿಲಗೊಂಡ ನಾನಾ ಪ್ರಕರಣಗಳು ಕೋರ್ಟ್ ಕಟಕಟೆಯಲ್ಲಿ ಇನ್ನೂ ಕೊಳೆಯುತ್ತಿವೆ. ಇನ್ನು ನಮ್ಮ ದೇಶದಲ್ಲಿ, ನ್ಯಾಯಾಂಗ ವ್ಯವಸ್ಥೆಯಲ್ಲಿ ಲಕ್ಷಾಂತರ ಪ್ರಕರಣಗಳು ಇನ್ನೂ ವಿಲೇವಾರಿಯಾಗದೇ ಬಾಕಿ ಉಳಿದಿವೆ.

ಹಲವಾರು ವರ್ಷಗಳಿಂದ ವಿಚಾರಣೆಯ ಮುಂದೆ ಸಾಗುತ್ತಿವೆ. ಒಂದು ಆಸ್ತಿ ಜಮೀನಿಗೆ ಸಂಬಂಧಿಸಿದ ವಿಚಾರಣೆ ಒಂದು ತಲೆಮಾರು ನ್ಯಾಯಾಲಯವನ್ನು ಅಲೆದು ಅಲೆದು ಸಾಕಾಗಿ ಕೊನೆಗೆ ಅವರ ಮಕ್ಕಳು ಪ್ರಸ್ತುತ ಹೋರಾಟ ನಡೆಸುತ್ತಿರುವ ವಿದ್ಯಮಾನಗಳಿವೆ.

ಇನ್ನು ಸಮಾಜವನ್ನೇ ಬೆಚ್ಚಿ ಬೀಳಿಸುವ, ನಾಗರಿಕ ಸಮಾಜವೇ ತಲೆತಗ್ಗಿಸುವ, ಅಪರಾಧ ಪ್ರಕರಣಗಳಲ್ಲಿ ಸಮಾಜಕ್ಕೆ ತಪ್ಪು ಸಂದೇಶ ಸಾರುವ, ಅಮಾನವೀಯ ಕೃತ್ಯಗಳಿಗೆ ಗಲ್ಲು ಶಿಕ್ಷೆ, ಜೀವಾವಧಿ ಶಿಕ್ಷೆಯಂತಹ ಶಿಕ್ಷೆಗಳು ಅಪರಾಧಿಗಳಿಗೆ ಉರುಳಾದ ನಿದರ್ಶನಗಳಿವೆ. ಇನ್ನು ಕೆಲವೊಂದು ಪ್ರಕರಣಗಳ ತೀರ್ಪುಗಳು ಕೂಡ ಸಮಾಜಕ್ಕೆ ಸಂಶಯಾಸ್ಪದ ರೀತಿಯಲ್ಲಿ ಹೊರಬರುವ ವಿದ್ಯಮಾನಗಳಿವೆ.

ಇನ್ನು ಜೀವಾವಧಿ ಶಿಕ್ಷೆಗೆ ಗುರಿಯಾದ ಕೈದಿಗಳು ಮೇಲ್ಮನವಿ ಸಲ್ಲಿಸಿ ಬಚಾವ್ ಆದ, ಸನ್ನಡತೆಯ ಆಧಾರದಲ್ಲಿ ಬಿಡುಗಡೆಯಾದ, ರಾಷ್ಟ್ರಪತಿಗಳ ಕ್ಷಮಾದಾನದಿಂದ ಮರುಜೀವ ಪಡೆದ ಕೈದಿಗಳನ್ನು ಕೂಡ ಕಾಣಬಹುದು. ಇನ್ನು ಅಪರಾಧ ಚಟುವಟಿಕೆಗಳಲ್ಲಿ ಪಾಲ್ಗೊಂಡು ಶಿಕ್ಷೆ ಅನುಭವಿಸಿ ಮನಪರಿವರ್ತನೆಗೊಂಡು ಸಮಾಜದಲ್ಲಿ ಸಭ್ಯ ಜೀವನ ನಡೆಸುವವರನ್ನು ಕೂಡ ಕಾಣಬಹುದಾಗಿದೆ.

ತಮಿಳುನಾಡಿನ ತುತ್ತುಕುಡಿಯ ಸಾತಾಂಕುಳಂ ಎಂಬ ಪ್ರದೇಶ. ಕೋವಿಡ್ ಲಾಕ್ ಡೌನ್ ನಿಯಮ ಉಲ್ಲಂಘಿಸಿ ಮೊಬೈಲ್ ವ್ಯಾಪಾರ ನಡೆಸುತ್ತಿರೆಂಬ ಆರೋಪದಲ್ಲಿ ಪಿ.ಜಯರಾಜ್ ಹಾಗೂ ಮಗ ಬೆನಿಕ್ಸ್ ಎಂಬವರನ್ನು ಸಾತಾಂಕುಳಂ ಠಾಣಾ ಪೊಲೀಸರು ಬಂಧಿಸಿ ಕಸ್ಟಡಿಗೆ ಪಡೆಯುತ್ತಾರೆ.

ರಾತ್ರಿಯಿಡೀ ಅಮಾನುಷವಾಗಿ ಮನಬಂದಂತೆ ಥಳಿಸಿದ ಪೊಲೀಸರ ದೈಹಿಕ ಹಯಿಂದಾಗಿ ಗಂಭೀರ ಗಾಯಗೊಂಡಿದ್ದ ಇವರನ್ನು ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಪೊಲೀಸ್ ಕಸ್ಟಡಿಯಲ್ಲಿದ್ದಾಗಲೇ ತಂದೆ ಮಗ ಸಾವಿಗೀಡಾದರು.

ಪೊಲೀಸರ ದೌರ್ಜನ್ಯಕ್ಕೆ ಠಾಣೆಯ ಮೇಜು, ಗೋಡೆ, ಪೀಠೋಪಕರಣ, ಲಾಠಿ ಎಲ್ಲದರಲ್ಲೂ ರಕ್ತ ಅಂಟಿಕೊಂಡಿರುವ ಸಂದರ್ಭದಲ್ಲಿ ಇದೇ ಸಂತ್ರಸ್ತರ ಕೈಯಲ್ಲಿ ರಕ್ತದ ಕಲೆಗಳನ್ನು ಸ್ವಚ್ಛಗೊಳಿಸಿ, ಠಾಣೆಯಲ್ಲಿದ್ದ ಸಿಸಿ ಟಿವಿ ಸಾಕ್ಷ್ಯಗಳನ್ನು ಅಳಿಸಿ ಸಾಕ್ಷ್ಯನಾಶಕ್ಕೆ ಪ್ರಯತ್ನಗಳು ನಡೆದಿದ್ದವು. ಈ ಘಟನೆ ಕೇವಲ ತಮಿಳುನಾಡು ಮಾತ್ರವಲ್ಲದೆ ಇಡೀ ದೇಶವನ್ನೇ ಬೆಚ್ಚಿಬೀಳಿಸಿತ್ತು.

ಪ್ರಕರಣ ತೀವ್ರ ಸ್ವರೂಪ ಪಡೆದುಕೊಂಡು ಮದ್ರಾಸ್ ಹೈಕೋರ್ಟ್‌ಗೆ ತಲುಪಿ ಸಿಬಿಐ ಅಂಗಳಕ್ಕೆ ಬಂದು ಸಿಬಿಐ ತನಿಖೆಯಲ್ಲಿ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಸೇರಿದಂತೆ 9 ಪೊಲೀಸರನ್ನು ಬಂಧಿಸಲಾಗಿ ಓರ್ವ ಕಾನ್ಸ್‌ಟೇಬಲ್‌ನನ್ನು ಪ್ರಕರಣದಲ್ಲಿ ಕೈಬಿಡಲಾಗಿತ್ತು. ಘಟನೆಯ ಸಂದರ್ಭ ಕಣ್ಣಾರೆ ಸಾಕ್ಷಿಯಾಗಿದ್ದ ಅದೇ ಠಾಣೆಯ ಕಾನ್ಸ್‌ಟೇಬಲ್ ರೇವತಿ ಎಂಬ ಹೆಣ್ಣು ಮಗಳು ಯಾವುದೇ ಬೆದರಿಕೆ, ಆಸೆ, ಆಮಿಷಗಳಿಗೆ ಬಗ್ಗದೆ ತನ್ನ ಸಹೋದ್ಯೋಗಿಗಳ ಕ್ರೌರ್ಯವನ್ನು ಬಿಚ್ಚಿಟ್ಟು, ಕರ್ತವ್ಯ ಪ್ರಜ್ಞೆ ಮೆರೆದಿರುವ ಕಾರಣಕ್ಕೆ ಎಲ್ಲ ತಪ್ಪಿತಸ್ಥರಿಗೆ ಮಧುರೈನ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿದೆ.

ಇನ್ನು ಕೆಲ ವರ್ಷಗಳ ಹಿಂದೆ ಬಿಜೆಪಿ ಮುಖಂಡ, ಧಾರವಾಡ ಜಿಲ್ಲಾ ಪಂಚಾಯತ್ ಸದಸ್ಯ ಯೋಗೇಶ್ ಗೌಡ ಕೊಲೆ ಪ್ರಕರಣ ರಾಜ್ಯವ್ಯಾಪಿ ಸದ್ದು ಮಾಡಿತ್ತು. ಪ್ರಕರಣದಲ್ಲಿ ಧಾರವಾಡ ಗ್ರಾಮೀಣ ಶಾಸಕ, ಅಂದಿನ ಸಚಿವರಾಗಿದ್ದ ವಿನಯ್ ಕುಲಕರ್ಣಿ ಹೆಸರು ಬಲವಾಗಿ ಕೇಳಿ ಬಂದಿತ್ತು. ಅಧಿಕಾರ ದುರುಪಯೋಗಪಡಿಸಿಕೊಂಡು ಪೊಲೀಸ್ ಇಲಾಖೆ, ಸಾಕ್ಷ್ಯ ನಾಶಪಡಿಸಿ, ಸಂಚು ರೂಪಿಸಿದ, ಸಾಕ್ಷಿಗಳಿಗೆ ಬೆದರಿಕೆ ಒಡ್ಡಿದ, ಪ್ರಕರಣದಲ್ಲಿ ಸಂಪೂರ್ಣ ಹಸ್ತಕ್ಷೇಪ ನಡೆಸಿದ ಹೀಗೆ ನಾನಾ ಆರೋಪಗಳು ಶಾಸಕ ವಿನಯ್ ಕುಲಕರ್ಣಿ ಹೆಗಲ ಮೇಲಿತ್ತು.

ಈ ಪ್ರಕರಣವು ಕೂಡ ಸಿಬಿಐ ಹೆಗಲೇರಿ, ತನಿಖೆಯಲ್ಲಿ ತಪ್ಪಿತಸ್ಥರೆಂದು ಸಾಬೀತಾದ ಹಿನ್ನೆಲೆಯಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತನಿಖಾಧಿಕಾರಿ ಠಾಣಾ ಸಬ್ ಇನ್ಸ್‌ಪೆಕ್ಟರ್, ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ ಸುಮಾರು 16 ಮಂದಿಯನ್ನು ದೋಷಿ ಎಂದು ಪರಿಗಣಿಸಿ ಜೀವಾವಧಿ ಶಿಕ್ಷೆಯ ತೀರ್ಪು ಪ್ರಕಟಿಸಿದೆ.

ಇನ್ನು ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ನಡೆಸಿರುವ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ, ಚಿತ್ರನಟ ದರ್ಶನ್ ಪ್ರಕರಣ, ಬಳ್ಳಾರಿ ಗಣಿಧನಿ ಗಾಲಿ ಜನಾರ್ದನ ರೆಡ್ಡಿ ಪ್ರಕರಣ ಇವೆಲ್ಲವೂ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಾಗರಿಕ ಸಮಾಜಕ್ಕೆ ಭರವಸೆ ಮೂಡಿಸುವ ತೀರ್ಪುಗಳೆಂದರೂ ತಪ್ಪಾಗಲಾರದು. ಕಾನೂನಿಗಿಂತ ಯಾರೂ ದೊಡ್ಡವರಲ್ಲ.

ಕಾನೂನಿಗೆ ಎಲ್ಲರೂ ತಲೆ ಬಾಗಬೇಕೆಂಬ ಸ್ಪಷ್ಟ ಸಂದೇಶಗಳನ್ನು ಹಲವಾರು ಪ್ರಕರಣದಲ್ಲಿ ನಮ್ಮ ನ್ಯಾಯಾಂಗ ವ್ಯವಸ್ಥೆ ಸಾರಿ ಹೇಳಿದೆ.

- ಆದರ್ಶ್ ಶೆಟ್ಟಿ, ಉಪ್ಪಿನಂಗಡಿ

ನರ್ಸಿಂಗ್ ಮತ್ತು ಮಹಿಳೆಯರು



ಸಂಪಾದಕೀಯ ಸದ್ಯಶೋಧನೆ ನರ್ಸಿಂಗ್ ಕ್ಷೇತ್ರವು ವೈದ್ಯಕೀಯ ಜಗತ್ತಿನ ಬೆನ್ನೆಲುಬು. ಆದರೆ, ಇತಿಹಾಸದುದ್ದಕ್ಕೂ ಈ ವೃತ್ತಿಯನ್ನು ಮಹಿಳೆಯರಿಗೇ ಸೀಮಿತ ಎಂಬಂತೆ ನೋಡಲಾಗುತ್ತಿದೆ. ಇಂದು ಜಾಗತಿಕವಾಗಿ ನರ್ಸಿಂಗ್ ಕ್ಷೇತ್ರದಲ್ಲಿ ಪುರುಷರ ಪಾಲು ಕೇವಲ ಶೇ.10ರಿಂದ ಶೇ.12 ರಷ್ಟಿದೆ. ಪುರುಷರು ಈ ಕ್ಷೇತ್ರಕ್ಕೆ ಬರಲು ಹಿಂಜರಿಯುವುದರ ಹಿಂದೆ ಕಾರಣಗಳೇನಾದರೂ ಇದ್ದಿರಬಹುದಾ? ಆಧುನಿಕ ನರ್ಸಿಂಗ್ ಉಗಮಕ್ಕೆ ಮೊದಲು, ಯುದ್ಧಭೂಮಿಗಳಲ್ಲಿ ಪುರುಷರೇ ಗಾಯಾಳುಗಳ ಆರೈಕೆ ಮಾಡುತ್ತಿದ್ದರು. ಆದರೆ, 19ನೇ ಶತಮಾನದಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ನರ್ಸಿಂಗ್ ಕ್ಷೇತ್ರವನ್ನು ವ್ಯವಸ್ಥಿತಗೊಳಿಸಿದಾಗ, ಅದನ್ನು ಮಹಿಳೆಯರಿಗೆ ಸೂಕ್ತವಾದ ವೃತ್ತಿ ಎಂದು ಬಿಂಬಿಸಲಾಯಿತು.

ಸ್ತ್ರೀಯರಲ್ಲಿ ಸಹಜವಾಗಿರುವ ತಾಳ್ಮೆ, ಕರುಣೆ ಮತ್ತು ಪೋಷಿಸುವ ಗುಣಗಳು ನರ್ಸಿಂಗ್‌ಗೆ ಅಗತ್ಯ ಎಂದು ನಂಬಲಾಯಿತು. ಇದು ಕಾಲಕ್ರಮೇಣ ಪುರುಷರನ್ನು ಈ ಕ್ಷೇತ್ರದಿಂದ ದೂರವಿಟ್ಟಿತು. ಸಮಾಜದಲ್ಲಿ ನರ್ಸ್ ಎಂದರೆ ಮಹಿಳೆ ಎಂಬ ಬಲವಾದ ನಂಬಿಕೆ ಬೇರೂರಿದೆ.

ಒಬ್ಬ ಪುರುಷ ನರ್ಸ್ ಆದಾಗ ಸಮಾಜ ಅವನನ್ನು ನೋಡುವ ದೃಷ್ಟಿ ವಿಭಿನ್ನವಾಗಿರುತ್ತದೆ. ಅವನು ಸಾಕಷ್ಟು ಬುದ್ಧಿವಂತನಲ್ಲದ ಕಾರಣ ಡಾಕ್ಟರ್ ಆಗಲು ಸಾಧ್ಯವಾಗದೇ ನರ್ಸ್ ಆಗಿದ್ದಾನೆ ಎಂಬ ತಪ್ಪು ಕಲ್ಪನೆ ಸಮಾಜದಲ್ಲಿದೆ. ಸಿನಿಮಾ ಮತ್ತು ಮಾಧ್ಯಮಗಳಲ್ಲಿ ಪುರುಷ ನರ್ಸ್‌ಗಳನ್ನು ಹಾಸ್ಯದ ಪಾತ್ರಗಳನ್ನಾಗಿ ತೋರಿಸುವುದು ಹೆಚ್ಚು. ಇದು ಯುವಕರು ಈ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಲು ಹಿಂಜರಿಯುವಂತೆ ಮಾಡುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ಆರೈಕೆ ಮತ್ತು ಪೋಷಣೆ ಗುಣಗಳನ್ನು ಸ್ತ್ರೀತ್ವದ ಲಕ್ಷಣಗಳೆಂದು ಪರಿಗಣಿಸಲಾಗುತ್ತದೆ. ಪುರುಷರು ಕಠಿಣವಾಗಿರಬೇಕು ಮತ್ತು ದೈಹಿಕ ಶ್ರಮದ ಕೆಲಸ ಮಾಡಬೇಕು ಎಂಬ ನಿರೀಕ್ಷೆ ಇರುತ್ತದೆ. ರೋಗಿಯ ಆರೈಕೆ ಮಾಡುವ ಕೆಲಸವು ಪುರುಷರಿಗೆ ಯೋಗ್ಯವಾದುದಲ್ಲ ಎಂಬ ಭ್ರಮೆಯು ಅನೇಕ ಪುರುಷರನ್ನು ಈ ವೃತ್ತಿಯಿಂದ ದೂರ ಇಟ್ಟಿದೆ.

ಹಲವು ಬಾರಿ ರೋಗಿಗಳು, ವಿಶೇಷವಾಗಿ ಮಹಿಳಾ ರೋಗಿಗಳು, ಪುರುಷ ನರ್ಸ್‌ಗಳಿಂದ ಚಿಕಿತ್ಸೆ ಅಥವಾ ಆರೈಕೆ ಪಡೆಯಲು ಮುಜುಗರ ಪಡುತ್ತಾರೆ. ಪ್ರಸೂತಿ ಅಥವಾ ಸ್ತ್ರೀರೋಗ ವಿಭಾಗಗಳಲ್ಲಿ ಪುರುಷ ನರ್ಸ್‌ಗಳಿಗೆ ಕೆಲಸ ಮಾಡಲು ಸವಾಲುಗಳು ಎದುರಾಗುತ್ತವೆ. ರೋಗಿಗಳ ಸಂಬಂಧಿಕರು ಕೂಡ ಪುರುಷ ನರ್ಸ್‌ಗಳನ್ನು ಸಂಶಯದ ದೃಷ್ಟಿಯಿಂದ ನೋಡುವುದುಂಟು.

ಈ ಅಸಹಕಾರವು ಪುರುಷ ನರ್ಸ್‌ಗಳ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ. ನರ್ಸಿಂಗ್ ಕಾಲೇಜುಗಳಲ್ಲಿ ಅಥವಾ ಆಸ್ಪತ್ರೆಗಳಲ್ಲಿ ಪುರುಷರಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳ (ಉದಾಹರಣೆಗೆ ಪ್ರತ್ಯೇಕ ಚೇಂಜಿಂಗ್ ರೂಮ್‌ಗಳು ಅಥವಾ ಡಾರ್ಮಿಟರಿಗಳು) ಕೊರತೆ ಇರಬಹುದು. ಅಲ್ಲದೇ, ಸಹೋದ್ಯೋಗಿಗಳೆಲ್ಲರೂ ಮಹಿಳೆಯರೇ ಇರುವುದರಿಂದ ಪುರುಷ ನರ್ಸ್‌ಗಳು ಒಂಟಿತನ ಅನುಭವಿಸಬಹುದು ಅಥವಾ ತಂಡದಲ್ಲಿ ಬೆರೆಯಲು ಕಷ್ಟವಾಗಬಹುದು.

ಇತ್ತೀಚಿನ ವರ್ಷಗಳಲ್ಲಿ ಪರಿಸ್ಥಿತಿ ನಿಧಾನವಾಗಿ ಬದಲಾಗುತ್ತಿದೆ. ಪುರುಷರು ನರ್ಸಿಂಗ್ ಕ್ಷೇತ್ರಕ್ಕೆ ಬರಲು ಒಲವು ತೋರುತ್ತಿದ್ದಾರೆ. ನರ್ಸಿಂಗ್ ವೃತ್ತಿಯಲ್ಲಿ ಉದ್ಯೋಗಾವಕಾಶಗಳು ಹೆಚ್ಚಿವೆ ಮತ್ತು ವಿದೇಶಗಳಲ್ಲಿ (ವಿಶೇಷವಾಗಿ ಗಲ್ಫ್ ರಾಷ್ಟ್ರಗಳು, ಯುರೋಪ್ ಮತ್ತು ಅಮೆರಿಕ) ಉತ್ತಮ ಸಂಬಳ ಸಿಗುತ್ತದೆ.

ತುರ್ತು ಚಿಕಿತ್ಸಾ ಘಟಕ, ಆಪರೇಷನ್ ಥಿಯೇಟರ್ ಮತ್ತು ಅರಿವಳಿಕೆ ವಿಭಾಗಗಳಲ್ಲಿ ಪುರುಷ ನರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ. ಅತಿಯಾದ ತೂಕವಿರುವ ರೋಗಿಗಳನ್ನು ಎತ್ತುವುದು ಅಥವಾ ಸ್ಥಳಾಂತರಿಸುವ ಕೆಲಸಗಳಿಗೆ ಪುರುಷರ ದೈಹಿಕ ಸಾಮರ್ಥ್ಯ ನೆರವಾಗುತ್ತದೆ. ವೃತ್ತಿಗೆ ಯಾವುದೇ ಲಿಂಗವಿಲ್ಲ. ವೈದ್ಯಕೀಯ ಸೇವೆ ಎಂಬುದು ಮಾನವೀಯತೆಯ ಕೆಲಸ.

ನರ್ಸಿಂಗ್ ಎಂದರೆ ಕೇವಲ ಸೇವೆ ಮಾತ್ರವಲ್ಲ, ಅದು ವಿಜ್ಞಾನ ಮತ್ತು ಕೌಶಲದ ಸಮ್ಮಿಲನ. ಸಮಾಜವು ತನ್ನ ಪೂರ್ವಗ್ರಹಗಳನ್ನು ಬಿಟ್ಟು, ಪುರುಷರೂ ಉತ್ತಮ ದಾದಿಯರಾಗಬಲ್ಲರು ಎಂಬುದನ್ನು ಒಪ್ಪಿಕೊಂಡರೆ, ಆರೋಗ್ಯ ಕ್ಷೇತ್ರದಲ್ಲಿರುವ ಸಿಬ್ಬಂದಿ ಕೊರತೆಯನ್ನು ನೀಗಿಸಲು ಸಾಧ್ಯವಾಗುತ್ತದೆ. ಭವಿಷ್ಯದಲ್ಲಿ ನಾವು ಹೆಚ್ಚು ಪುರುಷ ನರ್ಸ್‌ಗಳನ್ನು ನೋಡುವುದರಿಂದ ಈ ವೃತ್ತಿಯಂದು ಸಮತೋಲನ ಬರಲಿದೆ.

- ವಿಶ್ವೇಶ್ವರ ಭಟ್

ಆಲೂರಿಗೆ ಮತ್ತೊಂದು ವಿದ್ಯುತ್ ಉಪಕೇಂದ್ರ

ಶಾಸಕ ಸಿಮೆಂಟ್ ಮಂಜು | 900 ಮೀ. ಕಾಂಕ್ರೀಟ್ ರಸ್ತೆಗೆ ಭೂಮಿಪೂಜೆ

• ಪ್ರಜೋದಯ ವರದಿ

ಆಲೂರು: ಮುಂದಿನ ಒಂದು ತಿಂಗಳಿನಲ್ಲಿ ತಾಲ್ಲೂಕಿಗೆ ಮತ್ತೊಂದು ವಿದ್ಯುತ್ ಉಪಕೇಂದ್ರ ಮಾಡುವುದಾಗಿ ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ಪಟ್ಟಣದ ಮುಖ್ಯ ರಸ್ತೆಯಂಚಿನಲ್ಲಿರುವ ಪ್ರವಾಸಿ ಮಂದಿರದಿಂದ ಕಸಬಾ ಯಡೂರು ಗ್ರಾಮದವರೆಗೆ 900 ಮೀ. ಕಾಂಕ್ರೀಟ್ ರಸ್ತೆಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸ್ವಾತಂತ್ರ ಬಂದು 75 ವರ್ಷ ಕಳೆದರೂ ಕೇವಲ ಒಂದು ವಿದ್ಯುತ್ ವಿತರಣೆ ಉಪಕೇಂದ್ರವಿತ್ತು. ಸದ್ಯ 27 ಕೋಟಿ ರೂ. ವೆಚ್ಚದಲ್ಲಿ ಅಬ್ಬನ ಬಳಿ ವಿದ್ಯುತ್ ಉಪ ಕೇಂದ್ರ ನಿರ್ಮಾಣವಾಗುತ್ತಿದೆ. ನಾಲ್ಕಾರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ. ತಾಲ್ಲೂಕಿನಲ್ಲಿ ಎರಡು ವಿದ್ಯುತ್ ಉಪಕೇಂದ್ರಗಳಾದರೆ ವಿದ್ಯುತ್

ಸಮಸ್ಯೆ ನಿವಾರಣೆಯಾಗಲಿದೆ ಎಂದು ತಿಳಿಸಿದರು.

ಯಡೂರು ಗ್ರಾಮದ ರಸ್ತೆ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಬಹುತೇಕ ಗ್ರಾಮೀಣ ಭಾಗದ ಹಲವಾರು ಗ್ರಾಮಗಳಲ್ಲಿ ಶಾಸಕರ ಅನುದಾನದಲ್ಲಿ ರಸ್ತೆಗಳ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಪಟ್ಟಣದ ಬಿಕ್ಕೋಡು ವೃತ್ತದಿಂದ ಬೈರಾಪುರದವರೆಗೆ ಸುಮಾರು 4.5 ಕೋಟಿ ರೂ. ವೆಚ್ಚದಲ್ಲಿ ರಸ್ತೆ ವಿಸ್ತರಣೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ತಾಲ್ಲೂಕಿನಲ್ಲಿ ವಾಟೆಹೊಳೆ, ಯಗಚಿ ನದಿ ಹರಿಯುತ್ತದೆ. ಎಂಟು ಏತ ನೀರಾವರಿಗಳು ಸ್ಥಗಿತಗೊಂಡಿವೆ. ಏತನೀರಾವರಿ ಯೋಜನೆಗಳನ್ನು ಪುನ: ಆರಂಭಿಸಿ ರೈತರ ಜಮೀನಿಗೆ ನೀರು ಹರಿಸುತ್ತೇನೆ. ವಾಟೆಹೊಳೆ ಯೋಜನೆಯಲ್ಲಿ 18 ಸಾವಿರ ಎಕರೆ ಪ್ರದೇಶಕ್ಕೆ ನೀರು ಕೊಡಬೇಕಾಗಿತ್ತು. ಕೇವಲ 5 ಸಾವಿರ ಎಕರೆ ಪ್ರದೇಶಕ್ಕೆ ಮಾತ್ರ ನೀರು ಹರಿಯುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿ ವಿದಾನಸಭೆ ಅಧಿವೇಶನದಲ್ಲಿ ಪ್ರಶ್ನೆಗಳನ್ನು ಮಾಡಿ ಯೋಜನೆ ಪೂರೈಸಲು ಶ್ರಮಿಸುತ್ತಿದ್ದೇನೆ. ಅಧಿವೇಶನದಲ್ಲಿ ಕ್ಷೇತ್ರದ ಅಭಿವೃದ್ಧಿ ಕುರಿತು ನೀರಾವರಿ, ರಸ್ತೆಗಳು, ವಿದ್ಯುತ್ ಬಗ್ಗೆ ಮಾತ್ರ ಪ್ರಶ್ನೆ ಮಾಡುತ್ತೇನೆ ಹೊರತು, ಯಾವುದೆ ವೈಯಕ್ತಿಕ ಪ್ರಶ್ನೆಗಳನ್ನು ಮಾಡುವುದಿಲ್ಲ ಎಂದರು.

ಸಭೆಯಲ್ಲಿ ಗ್ರಾಮಸ್ಥರಾದ ವೈ. ಬಿ. ಟೀಕರಾಜ್, ಶಂಕರಪ್ಪ, ವೈ. ಡಿ. ವಿಶ್ವನಾಥ್, ಪುಟ್ಟಸ್ವಾಮಿ, ಗಂಗಾಧರ ಶಾಸ್ತ್ರಿ, ಮೋಹನ್, ರವಿ, ನಂಜುಂಡಪ್ಪ ಇನ್ನಿತರರು ಉಪಸ್ಥಿತರಿದ್ದರು.

ಬೇಲೂರು ಚನ್ನಕೇಶವನ ಸ್ಪರ್ಶಿಸಿದ ಸೂರ್ಯರಶ್ಮಿ

ಸೌರಮಾನದ ಮೇಷಮಾಸ ಒಂಬತ್ತನೇ ದಿನದಂದು ಪ್ರಕೃತಿ ವಿಸ್ಮಯ

• ಪ್ರಜೋದಯ ವರದಿ

ಬೇಲೂರು: ಜಗತ್ಪ್ರಸಿದ್ಧ ಶ್ರೀ ಚೆನ್ನಕೇಶವನ ದೇವಾಲಯದ ಗರ್ಭಗೃಹಕ್ಕೆ ಬುಧವಾರ ಬೆಳಿಗ್ಗೆ ಸೂರ್ಯನ ರಶ್ಮಿಗಳು ಪ್ರವೇಶಿಸಿ ಶ್ರೀಚೆನ್ನಕೇಶವ ಮೂರ್ತಿಯನ್ನು ಬೆಳಗಿಸುವ ಮೂಲಕ ವಿಸ್ಮಯ ಮೂಡಿಸಿದವು.

ಸೌರಮಾನದ ಮೇಷಮಾಸ 9 ತ್ತನೇ ದಿನದಂದು ಉತ್ತರಾಯಣದಲ್ಲಿ ಇದು ಪ್ರತಿವರ್ಷ ಘಟಿಸುತ್ತದೆ. ಹಾಗೆ ಈ ವರ್ಷದ ದಿನವಾದ ಬುಧವಾರ ಸೂರ್ಯರಶ್ಮಿ ಪ್ರವೇಶ ನಡೆಯಿತು. ಬೆಳಿಗ್ಗೆ 6 ಗಂಟೆ 9 ನಿಮಿಷಕ್ಕೆ ಸೂರ್ಯೋದಯವಾದರೂ ಕೆಲವು ಅಡೆತಡೆಗಳಿಂದ 6.12ಕ್ಕೆ ಮಹಾದ್ವಾರದ ಮೂಲಕ ಸೂರ್ಯ ದರ್ಶನವಾಯಿತು. ಮಂಜಿನ ಕಾರಣ ಕೆಂಪು ಕಿರಣಗಳು ಮಂಕಾಗಿದ್ದವು. 6.20ರ ನಂತರ ಕೆಂಪುಕಿರಣಗಳು ನವರಂಗದ ಮೂಲಕ ನಿರ್ಗಮಿಸಿದವು.

ಸೂರ್ಯನ ಚಿನ್ನದ ಬಣ್ಣದ ಕಿರಣಗಳು ರಾಜಗೋಪುರದ ಮೊದಲನೇ ಗವಾಕ್ಷಿಯ ಮೂಲಕ ಗರ್ಭಗೃಹಕ್ಕೆ ಪ್ರವೇಶಿಸಿ ಕೇಶವನ ಮೂಲಮೂರ್ತಿಯ



ಮಂಡಿ, ಪಾದ, ಗರುಡ ಪೀಠಗಳ ನೇರಕ್ಕೆ ಬಿದ್ದವಾದರೂ ಈದಿನ ರಾಮಾನುಜ ಜಯಂತಿಯ ನಿಮಿತ್ತ ಮೂಲಮೂರ್ತಿಯ ಮುಂಬದಿಗೆ ಶುಕನಾಸಿಯಲ್ಲಿ ಉತ್ಸವಮೂರ್ತಿಯನ್ನು ಇಟ್ಟಿದ್ದ ಕಾರಣ ಸೂರ್ಯ ರಶ್ಮಿಗಳು ಅದರ ಮೇಲೆ ಬಿದ್ದವು. ಮೂರು ವರ್ಷಗಳಿಗೊಮ್ಮೆ ಹೀಗಾಗುತ್ತದೆ.

ನಂತರ ಕಿರಣಗಳು ಕೆಳಗಿಳಿಯಲಾರಂಭಿಸಿ ಗರ್ಭಗೃಹ, ಶುಕನಾಸಿಗಳನ್ನು ದಾಟಿ ನವರಂಗಕ್ಕೆ ಬಂದವು. ನಾಟ್ಯವೇದಿಕೆಯ ಮೇಲೆ ಬಿದ್ದ ಪ್ರಖರ ಸ್ವರ್ಣರಶ್ಮಿಗಳು ಪ್ರತಿಫಲಿಸಿ ನವರಂಗ, ಉತ್ಸವ ಮೂರ್ತಿ ಹಾಗೂ ಮೂಲಮೂರ್ತಿಯ ಮೇಲೆ ಮತ್ತೆ ಬಿದ್ದವು. 6.45 ರ ಹೊತ್ತಿಗೆ ಕಿರಣಗಳು ನವರಂಗದಿಂದ ಚಲಿಸಿ, ಪೂರ್ವ ದ್ವಾರದ ಮೂಲಕ ಹೊರಕ್ಕೆ ನಿರ್ಗಮಿಸಿದವು. ನಂತರ ಆಗಮಿಕ ಶ್ರೀ ಶ್ರೀನಿವಾಸ ಭಟ್ಟರ್ ಅವರು ಚೆನ್ನಕೇಶವನಿಗೆ ಮಂಗಳಾರತಿ ಮಾಡಿ, ದರ್ಶನಾಕಾಂಕ್ಷಿ ಭಕ್ತರಿಗೆ ಕ್ಷೀರತೀರ್ಥ ವಿತರಿಸಿದರು.

ಡಾ. ಶ್ರೀವತ್ಸ ಎಸ್.ವಟಿ ಮಾತನಾಡಿ, ಸೂರ್ಯರಶ್ಮಿ ಪ್ರವೇಶದ ಸಂಭಾವ್ಯತೆಯನ್ನು ಖಗೋಳ ವಿದ್ಯಮಾನಗಳು ಹಾಗೂ ಗಣಿತದ ಆಧಾರದಿಂದ 2003ರಲ್ಲಿ ನಾನು ಸಂಶೋಧಿಸಿ ತಿಳಿಸಿದ್ದೆ. 2004ರಿಂದ ಪ್ರತಿವರ್ಷ ಸೂರ್ಯರಶ್ಮಿ ಪ್ರವೇಶೋತ್ಸವವನ್ನು ದೇವಾಲಯದ ನಿರ್ವಹಣಾ ಮಂಡಳಿಯು ಆಚರಿಸಿಕೊಂಡು ಬರುತ್ತಿದೆ. ಅವರಿಗೂ, ಅರ್ಚಕ ಪರಿವಾರದವರಿಗೂ, ಬೆಳಗಿನ ಜಾವವೇ ದೇವಾಲಯದ ಬಾಗಿಲನ್ನು ತೆರೆಯಲು ಸಹಕರಿಸಿದ ಭಾರತೀಯ ಪುರಾತತ್ವ ಸರ್ವೇಕ್ಷಣದ ಅಧಿಕಾರಿಗಳಿಗೂ, ಆಗಮಿಸಿದ ಭಕ್ತರುಗಳಿಗೂ ಧನ್ಯವಾದ ತಿಳಿಸಿದರು.

ಸಿಲಿಂಡರ್‌ಗಾಗಿ ಗ್ಯಾಸ್ ಏಜೆನ್ಸಿ ಮುಂದೆ ಕ್ಯೂ

• ಪ್ರಜೋದಯ ವರದಿ

ಅರಕಲಗೂಡು: ಮಧ್ಯಪ್ರಾಚ್ಯ ದೇಶಗಳ ಯುದ್ಧದ ಬಿಕ್ಕಟ್ಟಿನಿಂದಾಗಿ ಜಿಲ್ಲೆಯಲ್ಲಿ ಗ್ಯಾಸ್ ಕೊರತೆ ರಗಳೆ ಮುಂದುವರಿದಿದೆ. ತಾಲ್ಲೂಕಿನ ಬರಗೂರು ಬಳಿಯ ಭಾರತ್ ಗ್ಯಾಸ್ ಏಜೆನ್ಸಿ ಎದುರು ಬುಧವಾರ ಬೆಳ್ಳಿಗ್ಗೆ ನೂರಾರು ಜನರು ಸಿಲಿಂಡರ್‌ಗಳಿಗಾಗಿ ಸರದಿ ಸಾಲಿನಲ್ಲಿ ನಿಂತು ಆಕ್ರೋಶ ವ್ಯಕ್ತಪಡಿಸಿದರು.

ಮೂರ್ನಾಲ್ಕು ದಿನದಿಂದ ಸಿಲಿಂಡರ್‌ಗಾಗಿ ಬಂದು ಕಾಯುತ್ತಿದ್ದರು ಗ್ಯಾಸ್ ಕೊಡುತ್ತಿಲ್ಲ ಎಂದು ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಭಾರತ್ ಗ್ಯಾಸ್ ಕನೆಕ್ಷನ್ ಹೊಂದಿರುವ ಕುಟುಂಬ ಸದಸ್ಯರು ಬೆಳಿಗ್ಗೆಯೇ ಖಾಲಿ ಸಿಲಿಂಡರ್ ಜೊತೆ ಏಜೆನ್ಸಿ ಬಳಿ ಬಂದು ನಿಂತಿದ್ದು, ಬೇರೆಲ್ಲಾ ಕಂಪನಿಯ ಸಿಲಿಂಡರ್‌ಗಳು ಸಿಗುತ್ತಿದೆ,

ಆದರೆ ಭಾರತ್ ಗ್ಯಾಸ್ ಮಾತ್ರ ಯಾಕೆ ಸಮಸ್ಯೆ ಆಗಿದೆ. ಗ್ರಾಮೀಣ ಭಾಗದ ಜನರಿಗೆ ಯಾಕೆ ಸಿಲಿಂಡರ್ ಕೊಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಳೆದ ಒಂದು ತಿಂಗಳಿಂದ ಇದೆ ಸಮಸ್ಯೆ ಆಗಿದ್ದು, ಈಗ ಸಮಸ್ಯೆ ಮತ್ತಷ್ಟು ಹೆಚ್ಚಾಗಿದೆ ಎಂದು ಜನರ ಅಸಮಾಧಾನ ಹೊರ ಹಾಕಿದ್ದಾರೆ.

ಕೆಲವರು ಇದನ್ನೇ ಬಂಡವಾಳ ಮಾಡಿಕೊಂಡು ಕೃತಕ ಸಮಸ್ಯೆ ಸೃಷ್ಟಿಸುತ್ತಿದ್ದು, ಒಂದು ಸಿಲಿಂಡರ್‌ಗೆ 500 ರಿಂದ 800 ರೂ. ಹೆಚ್ಚಿನ ಹಣಕ್ಕೆ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಿದ್ದಾರೆಂಬ ಶಂಕೆಯನ್ನೂ ಜನರು ವ್ಯಕ್ತಪಡಿಸುತ್ತಿದ್ದಾರೆ.

ಕೂಡಲೇ ತಾಲ್ಲೂಕು ಆಡಳಿತ ಈ ಸಂಬಂಧ ಪರಿಶೀಲನೆ ನಡೆಸಿ ಕಳ್ಳಾಟ ನಡೆಸುತ್ತಿರುವವರ ವಿರುದ್ಧ ಕೂಡಲೇ ಕ್ರಮ ಕೈಗೊಂಡು ಗ್ರಾಹಕರಿಗೆ ಸರಿಯಾದ ಸಮಯಕ್ಕೆ ಗ್ಯಾಸ್ ಸಿಲಿಂಡರ್‌ಗಳನ್ನು ಪೂರೈಕೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಬಿತ್ತನೆ ಬೀಜ - ರಸಗೊಬ್ಬರ ದಾಸ್ತಾನಿಕರಿಸಲು ಸೂಚನೆ

ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡದಂತೆ ಅಧಿಕಾರಿಗಳು ಎಚ್ಚರ ವಹಿಸಿ

• ಪ್ರಜೋದಯ ವರದಿ

ಹಾಸನ: ಪೂರ್ವ ಮುಂಗಾರು ಹಂಗಾಮು ಪ್ರಾರಂಭವಾಗಿದ್ದು, ಬಿತ್ತನೆ ಬೀಜ ಹಾಗೂ ರಸಗೊಬ್ಬರ ಗಳನ್ನು ದಾಸ್ತಾನಿಕರಿಸಲು ಕ್ರಮವಹಿಸುವಂತೆ ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಜಿಲ್ಲೆಯ 2026-27ರ ಮುಂಗಾರು ಹಂಗಾಮಿನ ರಸಗೊಬ್ಬರಗಳ ಸಮರ್ಪಕ ಸರಬರಾಜು ಮತ್ತು ವಿತರಣೆ ಕುರಿತು ಸಭೆ ನಡೆಸಿ ಮಾತನಾಡಿದ ಅವರು ರಸಗೊಬ್ಬರ ಮಳಿಗೆಗಳಲ್ಲಿ ನಿಗದಿ ಪಡಿಸಿದ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡದಂತೆ ಎಚ್ಚರ

ವಹಿಸಬೇಕು ಎಂದರು.

ರಸಗೊಬ್ಬರ ಮಳಿಗೆಗಳಲ್ಲಿ ರಸಗೊಬ್ಬರಗಳ ದಾಸ್ತಾನು ಹಾಗೂ ದರಪಟ್ಟಿಯನ್ನು ಕಡ್ಡಾಯವಾಗಿ ಪ್ರದರ್ಶಿಸುವುದು, ಜಿಲ್ಲೆಯ ಎಲ್ಲಾ ರಸಗೊಬ್ಬರ ಪರಿವೀಕ್ಷಕರು, ಕಡ್ಡಾಯವಾಗಿ ತಮ್ಮ ವ್ಯಾಪ್ತಿಯಲ್ಲಿ ಬರುವ ರಸಗೊಬ್ಬರ ಮಳಿಗೆಗಳಿಗೆ ಭೇಟಿ ನೀಡಿ ರಸಗೊಬ್ಬರ ದಾಸ್ತಾನು ಪರಿಶೀಲಿಸಬೇಕು ಹಾಗೂ ಕೃತಕ ಅಭಾವ ಸೃಷ್ಟಿಯಾಗದಂತೆ ನೋಡಿಕೊಳ್ಳುವಂತೆ ತಿಳಿಸಿದರಲ್ಲದೆ, ರಸಗೊಬ್ಬರ ಮಳಿಗೆಗಳಲ್ಲಿ ಹಾಲಿ ದಾಸ್ತಾನು ಇರುವ ರಸಗೊಬ್ಬರಕ್ಕೂ ಪಿಒಎಸ್ ಮಷೀನ್ ನಲ್ಲಿರುವ ರಸಗೊಬ್ಬರಕ್ಕೆ ಹೋಲಿಕೆ ಮಾಡಿ ವ್ಯತ್ಯಾಸವಿದ್ದಲ್ಲಿ ಸರಿಪಡಿಸಬೇಕು, ರಸಗೊಬ್ಬರ ಮಾರಾಟಗಾರರು ಕಡ್ಡಾಯವಾಗಿ ಪಿಒಎಸ್ ಮಷೀನ್‌ನಲ್ಲಿಯೇ ರಸಗೊಬ್ಬರಗಳನ್ನು ವಿತರಣೆ ಮಾಡಲು ಕ್ರಮ ವಹಿಸಿಬೇಕು ಎಂದು ಸೂಚಿಸಿದರು.

2026-27 ನೇ ಸಾಲಿನಲ್ಲಿ ಜಿಲ್ಲೆಗೆ ನಿಗದಿಪಡಿಸಿದ ರಸಗೊಬ್ಬರದಲ್ಲಿ ಸರಬರಾಜುದಾರರು ಶೇಕಡಾ 25 ರಷ್ಟು ರಸಗೊಬ್ಬರವನ್ನು ಕಾಪು ದಾಸ್ತಾನಿನಲ್ಲಿ ಇರಿಸಬೇಕು, ಯೂರಿಯಾ ರಸಗೊಬ್ಬರವನ್ನು ಪಿಒಎಸ್ ಮಷಿನ್ ಜೊತೆಗೆ ಕಡ್ಡಾಯವಾಗಿ ಇಲಾಖೆಯ ಕೆ-ಕಿಸಾನ್ ತಂತ್ರಾಂಶದ ಮೂಲಕ ರೈತರ ಎಫ್‌ಐಡಿ/ಆಧಾರ್ ಸಂಖ್ಯೆಯನ್ನು ನೊಂದಣಿ ಮಾಡಿಕೊಂಡು ಯೂರಿಯಾ ರಸಗೊಬ್ಬರವನ್ನು ವಿತರಿಸುವಂತೆ ನಿರ್ದೇಶನ ನೀಡುವಂತೆ ತಿಳಿಸಿದರು.

ರಸಗೊಬ್ಬರ ಬಳಕೆ ಕಡಿಮೆ ಮಾಡಿ ಸಾವಯವ ಗೊಬ್ಬರ ಬಳಕೆ ಮಾಡುವಂತೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅರಿವು ಮೂಡಿಸುವುದರ ಜೊತೆಗೆ ನೈಸರ್ಗಿಕ ಕೃಷಿಗೆ ಹೆಚ್ಚು ಒತ್ತು ನೀಡುವಂತೆ ಕೃಷಿಕರಿಗೆ ತಿಳುವಳಿಕೆ ನೀಡಲಾಗುತ್ತಿದೆ ಹಾಗೂ ನ್ಯಾನೋ ಯೂರಿಯಾ ಬಳಕೆಗೆ ಉತ್ತೇಜಿಸಲಾಗುತ್ತಿದೆ ಎಂದು ಜಂಟಿ ಕೃಷಿ ನಿರ್ದೇಶಕ ರಮೇಶ್ ಅವರು ಸಭೆಗೆ ಮಾಹಿತಿ ನೀಡಿದರು.

ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ರಸಗೊಬ್ಬರ ಹಾಗೂ ಬಿತ್ತನೆ ಬೀಜ ವರ್ತಕರು ಉಪಸ್ಥಿತರಿದ್ದರು.

ಅರಣ್ಯ ಭೂಮಿಯಲ್ಲಿ ಅಕ್ರಮ ವಾಸ: ಕ್ರಮಕ್ಕೆ ಆಗ್ರಹ

ಅರಣ್ಯ ವೀಕ್ಷಕನ ಅಮಾನತಿಗೆ ಒತ್ತಾಯ

• ಪ್ರಜೋದಯ ವರದಿ

ಸಕಲೇಶಪುರ: ತಾಲ್ಲೂಕಿನ ಅರಣ್ಯ ಭೂಮಿಯಲ್ಲಿ ಅಕ್ರಮವಾಗಿ ಗುಡಿಸಲುಗಳನ್ನು ನಿರ್ಮಿಸಿರುವ ಕುರಿತು ಪಾರದರ್ಶಕ ತನಿಖೆ ನಡೆಸಿ ಕ್ರಮ ಕೈಗೊಳ್ಳದಿದ್ದರೆ ಸೋಮವಾರದಿಂದ ಉಪವಿಭಾಗಾಧಿಕಾರಿ ಕಚೇರಿ ಮುಂದೆ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ತಾಲೂಕು ಅಧ್ಯಕ್ಷ ಅಧ್ಯಕ್ಷ ಗಗನ್ ಹಾಡ್ಲಹಳ್ಳಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವಾಲದಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಡಚಹಳ್ಳಿ ಗ್ರಾಮದ ಸರ್ವೇ ನಂ. 28ರ ಅರಣ್ಯ ಜಾಗದಲ್ಲಿ ತಮಿಳುನಾಡು ಮೂಲದ ಕೆಲವರು ಅಕ್ರಮವಾಗಿ ನೆಲೆಸಿದ್ದಾರೆ. ಇವರಿಗೆ ಜಲ್ ಜೀವನ್ ಮಿಷನ್ ಅಡಿ ನೀರು ಹಾಗೂ ಚೆಸ್ಕಾಂ

ಮೂಲಕ ವಿದ್ಯುತ್ ಸಂಪರ್ಕವನ್ನೂ ಕಲ್ಪಿಸಲಾಗಿದೆ. ಇದರ ಹಿಂದೆ ಸ್ಥಳೀಯ ಪ್ರಭಾವಿಗಳು ಹಾಗೂ ಅರಣ್ಯ ಇಲಾಖೆಯ ಗುತ್ತಿಗೆ ಸಿಬ್ಬಂದಿಗಳ ಕೈವಾಡವಿರುವ ಶಂಕೆ ಇದೆ ಎಂದು ಆರೋಪಿಸಿದರು.

ಜಿಲ್ಲಾ ಕರವೇ ಪ್ರಧಾನ ಕಾರ್ಯದರ್ಶಿ ರಘು ಪಾಳ್ಯ ಮಾತನಾಡಿ, ಒಂದು ಕಡೆ ಡೀಮ್ಡ್ ಫಾರೆಸ್ಟ್ ಹೆಸರಿನಲ್ಲಿ ಮೂಲ ನಿವಾಸಿ ರೈತರಿಗೆ ತೆರವು ನೋಟಿಸ್ ನೀಡುತ್ತಿರುವ ಅರಣ್ಯ ಇಲಾಖೆ, ಮತ್ತೊಂದೆಡೆ ಹೊರರಾಜ್ಯದವರಿಗೆ ಅರಣ್ಯದೊಳಗೆ ಅಕ್ರಮ ವಾಸಕ್ಕೆ ಅವಕಾಶ ನೀಡುತ್ತಿರುವುದು ದ್ವಂದ್ವ ನೀತಿಯಾಗಿದೆ ಎಂದು ಟೀಕಿಸಿದರು.

ತಾಲ್ಲೂಕು ರೈತ ಘಟಕದ ಅಧ್ಯಕ್ಷ ಬೊಮ್ಮನಕೆರೆ ವಸಂತ್ ಅವರು ಮಾತನಾಡಿ, ಈ ಅಕ್ರಮಕ್ಕೆ ಸಹಕರಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಚೆಸ್ಕಾಂ ಹಾಗೂ ಜಲ್ ಜೀವನ್ ಮಿಷನ್ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಅರಣ್ಯ ವೀಕ್ಷಕನನ್ನು ಕೂಡಲೇ ಅಮಾನತು ಮಾಡಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕು ಕಾರ್ಮಿಕ ಘಟಕದ ಅಧ್ಯಕ್ಷ ಸಂಗ್ರಾಮ್ ಹೊಡಚಹಳ್ಳಿ ಅವರು ಮಾತನಾಡಿ, ಮಾಧ್ಯಮಗಳಲ್ಲಿ ಸುದ್ದಿ ಪ್ರಸಾರವಾದ ಮೇಲೆ ಕೇವಲ ಎರಡು ಗುಡಿಸಲುಗಳನ್ನು ತೆರವುಗೊಳಿಸಿರುವುದು ಕಣ್ಣೊರೆಸುವ ತಂತ್ರವಾಗಿದೆ ಎಂದು ದೂರಿದರು. ಈ ಗಂಭೀರ ಪ್ರಕರಣದ ಕುರಿತು ಸಮಗ್ರ ತನಿಖೆಯಾಗದಿದ್ದಲ್ಲಿ ಪ್ರತಿಭಟನೆ ತೀವ್ರಗೊಳಿಸುವುದಾಗಿ ಪದಾಧಿಕಾರಿಗಳು ಎಚ್ಚರಿಸಿದ್ದಾರೆ.

ಕರವೇ ಉಪಾಧ್ಯಕ್ಷ ಸುನಿಲ್, ಕಾರ್ಯದರ್ಶಿ ನವೀನ್ ಹಾಗೂ ರಾಹುಲ್ ಉಪ ಸ್ಥಿತರಿದ್ದರು.

ಸ್ವಾಭಿಮಾನದ ಬದುಕು ಭಾವಸಾರ ಕ್ಷತ್ರಿಯ ಸಮಾಜದ ವೈಶಿಷ್ಟ

• ಪ್ರಜೋದಯ ವರದಿ

ಅರಸೀಕೆರೆ: ರುಕ್ಮಿಣಿ ಪಾಂಡುರಂಗನಲ್ಲಿ ಅಚಲಭಕ್ತಿ, ಕೈ ಕಸುಬಿನ ಮೇಲೆ ನಂಬಿಕೆ ಹಾಗೂ ಸ್ವಾಭಿಮಾನದ ಬದುಕು. ಇದು ಭಾವಸಾರ ಕ್ಷತ್ರಿಯ ಸಮಾಜದ ವೈಶಿಷ್ಟ ಎಂದು ತಾಲ್ಲೂಕು ಒಕ್ಕಲಿಗರ ಸಮಾಜದ ಅಧ್ಯಕ್ಷ ಆರ್. ಅನಂತಕುಮಾರ್ ಹೇಳಿದರು.

ನಗರದ ರುಕ್ಮಿಣಿ ಪಾಂಡುರಂಗ ದೇವಾಲಯದಲ್ಲಿ ಭಾವಸಾರ ಕ್ಷತ್ರಿಯ ಸಮಾಜದ ವತಿಯಿಂದ ಆಯೋಜಿಸಿದ್ದ 89ನೇ ದಿಂಡಿ ಮಹೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಯುಗಯುಗಾಂತರದ ಇತಿಹಾಸ ಹೊಂದಿರುವ ಭಾವಸಾರ ಕ್ಷತ್ರಿಯ ಸಮಾಜ ಇತರ ಸಮಾಜಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ. ವಸ್ತ್ರ ವಿನ್ಯಾಸದಲ್ಲಿ ಸಿದ್ದಹಸ್ತರಾಗಿರುವ ಭಾವಸಾರ ಕ್ಷತ್ರಿಯ ಸಮಾಜದ

ಬಹುತೇಕ ಮಂದಿ ಟೈಲರಿಂಗ್ ವೃತ್ತಿಯಲ್ಲಿ ಬದುಕು ಕಟ್ಟಿಕೊಂಡು ಬಂದಿದೆ ಎಂದರು.

ಟೈಲರಿಂಗ್ ವೃತ್ತಿ ಒಂದು ಶ್ರೇಷ್ಠ ವೃತ್ತಿಯಾಗಿದೆ. ಆದರೂ ಸಹ ಪ್ರಸ್ತುತ ಸಮಾಜ ಆಧುನಿಕತೆಯ ನಾಗಾಲೋಟದಲ್ಲಿ ಸಾಗುತ್ತಿದ್ದು ಭಾವಸಾರ ಕ್ಷತ್ರಿಯ ಸಮಾಜದ ಬಾಂಧವರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ ಇತರ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಪ್ರೇರಣೆ ನೀಡಿ ಎಂದು ಕಿವಿಮಾತು ಹೇಳಿದರು.

ಬಂಕಾಪುರದ ರುಕ್ಮಿಣಿ ಪಾಂಡುರಂಗ ದೇವಾಲಯದ ಗುರುಗಳಾದ ಭಾನುದಾಸ್ ಸರ್ವದೆ ಮಾತನಾಡಿ, ಯಾವುದೇ ಸಂಘಟನೆಯಾಗಲಿ ಅಥವಾ ಸಂಘ ಸಂಸ್ಥೆಗಳಾಗಲಿ ನಿರಂತರವಾಗಿ ಒಂದು ಕಾರ್ಯಕ್ರಮವನ್ನಾಗಲಿ, ಸಾಂಪ್ರದಾಯಿಕ ಆಚರಣೆಗಳನ್ನಾಗಲಿ ಮುನ್ನಡೆಸಿಕೊಂಡು ಬರುವುದು ಕಷ್ಟಸಾಧ್ಯ ಆದರೆ ಇಲ್ಲಿನ ಭಾವಸಾರ ಕ್ಷತ್ರಿಯ ಸಮಾಜ ನಿರಂತರವಾಗಿ 89 ವರ್ಷಗಳ ಕಾಲ ದಿಂಡಿ ಮಹೋತ್ಸವವನ್ನು ಆಚರಿಸುತ್ತಾ ರುಕ್ಮಿಣಿ ಪಾಂಡುರಂಗನ ಅನುಗ್ರಹಕ್ಕೆ ಪಾತ್ರವಾಗುತ್ತಾ ಬಂದಿರುವುದು ಇತರರಿಗೆ ಆದರ್ಶವಾಗಿದೆ ಎಂದರು.

ಸಮಾರಂಭದಲ್ಲಿ ಭಾವಸಾರ ಕ್ಷತ್ರಿಯ ಸಮಾಜದ ಗೌರವ ಅಧ್ಯಕ್ಷ ಕೃಷ್ಣಮೂರ್ತಿ, ಅಧ್ಯಕ್ಷ ನರೇಶ್, ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಟಿ. ಆನಂದ್, ಮಾಜಿ ಅಧ್ಯಕ್ಷ ರಾಮಚಂದ್ರ, ಉಪಾಧ್ಯಕ್ಷ ಹೇಮಂತ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಎಸ್.ವಿ.ನವೀನ್‌ಕುಮಾರ್ ಇತರರು ಉಪಸ್ಥಿತರಿದ್ದರು.

ಉತ್ಸವ: ಸಂಜೆ ರುಕ್ಮಿಣಿ ಸಮೇತನದ ಪಾಂಡುರಂಗ ಸ್ವಾಮಿಯ ಉತ್ಸವ ಮೂರ್ತಿಯನ್ನು ನಗರದ ಪ್ರಮುಖ ರಸ್ತೆಗಳಲ್ಲಿ ಉತ್ಸವ ಮಾಡಲಾಯಿತು. ಉತ್ಸವದಲ್ಲಿ ಭಾವಸಾರ ಕ್ಷತ್ರಿಯ ಸಮಾಜದ ನೂರಾರು ಮಂದಿ ಪಾಲ್ಗೊಂಡಿದ್ದರು.

ಹೆಚ್‌ಪಿವಿ ಲಸಿಕಾ ಅಭಿಯಾನ

• ಪ್ರಜೋದಯ ವರದಿ

ಅರೇಹಳ್ಳಿ: ಬೇಲೂರು ತಾಲ್ಲೂಕಿನ ಅರೇಹಳ್ಳಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹೆಚ್‌ಪಿವಿ ಲಸಿಕೆ ಅಭಿಯಾನ ಹಾಗು ಪೋಷಕರಿಗೆ-14 ವರ್ಷ ವಯಸ್ಸಿನ ಹೆಣ್ಣು ಮಕ್ಕಳಿಗೆ ಮಾಹಿತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮಕ್ಕಳ ತಜ್ಞೆ ಡಾ|| ಅನುಪಮಾ ಅವರು ಮಾತನಾಡಿ, ಲಸಿಕೆ ಹಾಗು ಅದರಿಂದ ಆಗುವ ಪ್ರಯೋಜನಗಳ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಲಸಿಕೆ ಕುರಿತು ಹಬ್ಬಿಸಲಾಗುತ್ತಿರುವ ಸುಳ್ಳು ಸುದ್ದಿಯನ್ನು ಯಾರೂ ನಂಬಬಾರದು. ಗರ್ಭಕಂಠದ ಕಾನ್ಸರ್ ತಡೆಗಟ್ಟುವ ನಿಟ್ಟಿನಲ್ಲಿ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳು ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಬೇಕು. ಅದಕ್ಕೆ ಪೋಷಕರು ಸಹ ಸಹಕಾರ ನೀಡಬೇಕೆಂದರು.

ತಾಸೀನಾ ರಜಾಕ್, ಶೃತಿ ಇದ್ದರು.

ಇಂದು ಭಗೀರಥ ಜಯಂತಿ

ಹಾಸನ: ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಏ.23 ರಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಭಗೀರಥ ಜಯಂತಿಯನ್ನು ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಕೆ.ಎಂ ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ, ಶಾಸಕ ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಶ್ರೇಯಸ್ ಎಂ. ಪಟೇಲ್, ಶಾಸಕರುಗಳಾದ ಹೆಚ್.ಡಿ. ರೇವಣ್ಣ, ಸಿ.ಎನ್ ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಸೂರಜ್ ರೇವಣ್ಣ, ಮಧು ಜಿ. ಮಾದೇಗೌಡ, ಕೆ, ವಿವೇಕಾನಂದ, ನಗರಾಭಿವೃದ್ಧಿ ಪ್ರಾಧಿಕಾರಾದ ಅಧ್ಯಕ್ಷ ಪಟೇಲ್ ಶಿವಣ್ಣ ಭಾಗವಹಿಸುವರು.

ಬೇಲೂರು ತಹಸೀಲ್ದಾರ್ ಕಾಂಗ್ರೆಸ್ ಏಜೆಂಟ್: ಬಿಜೆಪಿ ಆರೋಪ

• ಪ್ರಜೋದಯ ವರದಿ

ಬೇಲೂರು: ಇಲ್ಲಿನ ತಹಸೀಲ್ದಾರ್ ಶ್ರೀಧರ್ ಕಂಕಣವಾಡಿ ಅಧಿಕಾರ ಸ್ವೀಕರಿಸಿದ ದಿನದಿಂದ ಕಾಂಗ್ರೆಸ್ ಏಜೆಂಟ್ ರೀತಿಯಲ್ಲಿ ವರ್ತಿಸುತ್ತಾ ಕಾಂಗ್ರೆಸ್ ಕಚೇರಿ ಕಟ್ಟಡ ನಿರ್ಮಾಣಕ್ಕೆ ಭ್ರಷ್ಟಾಚಾರ ನಡೆಸಿದ ಹಣ ನೀಡುತ್ತಿದ್ದಾರೆ. ಇಂತಹ ಭ್ರಷ್ಟ ತಹಸೀಲ್ದಾರ್ ನಮ್ಮ ರಾಜಕೀಯ ಬದುಕಿನಲ್ಲಿ ನೋಡಿಲ್ಲ ಎಂದು ಬೇಲೂರು ತಾಲ್ಲೂಕು ಬಿಜೆಪಿ ಅಧ್ಯಕ್ಷ ಸಂಜು ಕೌರಿ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಹಸೀಲ್ದಾರ್ ಬೇಲೂರಿಗೆ ಬಂದ ದಿನದಿಂದ ಬಗರ್ ಹುಕ್ಕಂ ಸಮಿತಿ ಸದಸ್ಯ ಕನಾಯ್ಕನಹಳ್ಳಿ ಪ್ರದೀಪ್ ತಾಲ್ಲೂಕು ಕಚೇರಿಯಲ್ಲಿ ಮಧ್ಯವರ್ತಿಯಾಗಿ ಭ್ರಷ್ಟಾಚಾರಕ್ಕೆ

ಮುನ್ನುಡಿ ಬರೆದ ಇಂತವರು ಶಾಸಕ ಹೆಚ್.ಕೆ.ಸುರೇಶ್ ಬಗ್ಗೆ ಮಾತನಾಡುವ ಯಾವುದೇ ನೈತಿಕತೆಯ ಇಲ್ಲ ಎಂದು ಆಕ್ರೋಶಭರಿತರಾದ ಅವರು, ಅಂಬೇಡ್ಕರ್ ಮತ್ತು ಬಸವ ಜಯಂತಿ ಕಾರ್ಯಕ್ರಮದಲ್ಲಿ

ಅವ್ಯವಸ್ಥೆ ಖಂಡಿಸಿ ಸಮಾಜದವರು ಪ್ರತಿಭಟನೆ ನಡೆಸುವ ವೇಳೆ ಶಾಸಕರು ಸಮಾಜದವರ ಸಮ್ಮುಖದಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದು ಯಾವುದೇ ತಪ್ಪು ಇಲ್ಲ, ಇದನ್ನೇ ಬಂಡವಾಳ ಮಾಡಿಕೊಂಡ ಬಗರ್ ಹುಕ್ಕಂ ಸಮಿತಿ ಸದಸ್ಯ ಕನಾಯ್ಕನಹಳ್ಳಿ ಪ್ರದೀಪ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ದೇಶಾಣಿ ಆನಂದ್, ಬಿಕ್ಕೋಡು ಹೋಬಳಿ ಕಾಂಗ್ರೆಸ್ ಅಧ್ಯಕ್ಷ ಮಲ್ಲೇಶ ಮತ್ತು ಪುರಸಭಾ ಮಾಜಿ ಅಧ್ಯಕ್ಷ ಎಂ.ಆರ್.ವೆಂಕಟೇಶ್ ಶಾಸಕರ ವಿರುದ್ಧ ಹತಾಶೆ ಮನೋಭಾವನೆಯಿಂದ ಹೇಳಿಕೆ ನೀಡುತ್ತಿರುವುದು ಶೋಚನೀಯ ಎಂದು ಅವರು ವ್ಯಂಗ್ಯವಾಡಿದರು.

ಶಾಸಕ ಹೆಚ್.ಕೆ.ಸುರೇಶ್ ಅವರು ವೀರಶೈವ ಲಿಂಗಾಯತ ಸಮಾಜದ ಅಧಿಕಾರಿಗಳನ್ನು ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ಆರೋಪಿಸುವ ಕನಾಯ್ಕನಹಳ್ಳಿ ಪ್ರದೀಪ, ದೇಶಾಣಿ ಆನಂದ್ ಮತ್ತು ಮಲ್ಲೇಶ್ ಈ ಮೂವರು ವೀರಶೈವ ಲಿಂಗಾಯತ ಸಮಾಜದ ಯಾವ ಸಭೆ ಸಮಾರಂಭಗಳಲ್ಲಿ ಮತ್ತು ಸಮಾಜದ ಸಂಘಟನೆಯಲ್ಲಿ ಭಾಗವಹಿಸಿದ ಬಗ್ಗೆ ಒಂದು ದಾಖಲೆ ನೀಡಲು ಸಾಧ್ಯವೇ? ಕಾಂಗ್ರೆಸ್ ಪಕ್ಷದಲ್ಲಿ ಶಾಮನೂರು ಶಿವಶಂಕರಪ್ಪನವರು ವೀರಶೈವ ಲಿಂಗಾಯತ ಸಮಾಜದ ಸರ್ವಾಂಗೀಣ ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಆದರೆ ಇವರ ಕೊಡುಗೆ ಏನು ಎಂದು ಪ್ರಶ್ನಿಸಿದ ಅವರು, ಬೇಲೂರು ಶಾಸಕರು ಎಲ್ಲಾ ಸಮಾಜ ಸಮುದಾಯದ ನಡುವೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಗ್ಯಾರೆಂಟಿ ಯೋಜನೆಯಿಂದ ದಿವಾಳಿಯಾದ ಕಾಂಗ್ರೆಸ್ ಸರ್ಕಾರದಿಂದ ತಮ್ಮ ಪರಿಶ್ರಮದಿಂದ ಅನುದಾನ ತಂದು ಬೇಲೂರಿನ ಸಮಗ್ರ ಅಭಿವೃದ್ಧಿಗೆ ಶ್ರೀಕಾರ ಹಾಕಿದ್ದಾರೆ. ಕಾಂಗ್ರೆಸ್ ನಾಯಕರ ಅಂತರಿಕ ಭಿನ್ನಾಭಿಪ್ರಾಯಗಳನ್ನು ಮುಚ್ಚಿ ಹಾಕಲು ಶಾಸಕರ ಮೇಲೆ ಇಲ್ಲಸಲ್ಲದ ಆರೋಪಿಸುವುದು ಖಂಡನೀಯ ಎಂದು ಹೇಳಿದರು.

ಈ ವೇಳೆ ಬಿಜೆಪಿ ಮುಖಂಡರಾದ ಕೋಗಿಲೆಮನೆ ಅರುಣಕುಮಾರ್, ಗೋಣಿಸೋಮನಹಳ್ಳಿ ಪ್ರಸನ್ನ, ಕೋಡನಹಳ್ಳಿ ಯತೀಸ್, ಜಯಂತ್, ರಂಜಿತಾ ಹಾಜರಿದ್ದರು.

ಇತಿಹಾಸ ಪ್ರಸಿದ್ದ ಶ್ರೀ ಪಟ್ಟಾಭಿರಾಮನಿಗೆ ವಿವಿಧ ಉತ್ಸವಗಳು | ವಿಧಿವತ್ತಾಗಿ ನಡೆದ ಧಾರ್ಮಿಕ ಕೈಂಕರ್ಯಗಳು

ವೈಭವದ ಶ್ರೀ ಪಟ್ಟಾಭಿರಾಮಸ್ವಾಮಿ ಮಹಾ ಬ್ರಹ್ಮರಥೋತ್ಸವ

• ಪ್ರಜೋದಯ ವರದಿ

ಅರಕಲಗೂಡು: ಇತಿಹಾಸ ಪ್ರಸಿದ್ದ ಶ್ರೀ ಪಟ್ಟಾಭಿರಾಮಸ್ವಾಮಿ ಮಹಾ ಬ್ರಹ್ಮರಥೋತ್ಸವವು ವೈಖಾನಸ ಆಗಮೋಕ್ತ ರೀತ್ಯಾ ನೂರಾರು ಭಕ್ತರ ಸಮ್ಮುಖದಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವದ ಅಂಗವಾಗಿ ಕಳೆದ ಹದಿನೈದು ದಿನಗಳಿಂದಲೇ ವಿವಿಧ ಬಗೆಯ ಪೂಜಾ ಕಾತ್ಯಕ್ರಮಗಳು ನಡೆಯುತ್ತಿದ್ದವು. ರಥೋತ್ಸವದ ಪೂರ್ವಭಾವಿಯಾಗಿ ಪಟ್ಟಾಭಿರಾಮ ಸ್ವಾಮಿಯ ಮೂಲಮೂರ್ತಿಗೆ ಪಂಚಾಮೃತ ಅಭಿಷೇಕ, ವಿವಿಧ ಹೋಮಗಳು, ಧ್ವಜಾರೋಹಣ, ನಿತ್ಯೋತ್ಸವಗಳು, ಹಂಸವಾಹನೋತ್ಸವ, ಶೇಷವಾಹನೋತ್ಸವ, ಪುಷ್ಪ ಮಂಟಪೋತ್ಸವ, ಸಿಂಹವಾಹನೋತ್ಸವ, ಗಜವಾಹನೋತ್ಸವ, ಸೀತಾರಾಮ ಕಲ್ಯಾಣೋತ್ಸವ ಮುಂತಾದ ಧಾರ್ಮಿಕ ಕೈಂಕರ್ಯಗಳು ವಿಧಿವತ್ತಾಗಿ ಜರುಗಿದವು. ರಥೋತ್ಸವದ ಅಂಗವಾಗಿ ದೇವಾಲಯದಲ್ಲಿ ಸೂರ ಮಂಡಲೋತ್ಸವ, ಬಲಿಪ್ರದಾನ, ನಿತ್ಯೋತ್ಸವ, ಯಾತ್ರಾದಾನ ಪೂರ್ವ ಕೃಷ್ಣ ಗಂಧೋತ್ಸವ, ಮಂಟಪೋತ್ಸವ ಹಾಗೂ ಇನ್ನಿತರ ವಿಶೇಷ ಪೂಜೆಗಳು ಪ್ರಧಾನ ಅರ್ಚಕರ ನೇತೃತ್ವದಲ್ಲಿ ನಡೆಯಿತು.

ಉತ್ಸವದ ವೇಳೆ ದೇವರ ಮೂರ್ತಿಯನ್ನು ವಿಶೇಷವಾಗಿ ಅಲಂಕರಿಸಿದ ಮಂಟಪದಲ್ಲಿ ಪ್ರತಿಷ್ಠಾಪಿಸಿ ಉತ್ಸವವನ್ನು ಅಡ್ಡಪಲ್ಲಕ್ಕಿಯಲ್ಲಿ ಕೂರಿಸಿ ಅನೇಕ ಸುತ್ತು ದೇವಾಲಯವನ್ನು ಪ್ರದಕ್ಷಿಣೆ ಹಾಕುವ ವೇಳೆ ಪ್ರತಿಯೊಂದು ಸುತ್ತಿಗೊಂದರಂತೆ ಪ್ರತ್ಯೇಕ ವಾದ್ಯಪ್ರಕಾರದ ಮೂಲಕ ಶ್ರೀಪಟ್ಟಾಭಿರಾಮಸ್ವಾಮಿಗೆ ಪೂಜೆ ನೆರವೇರಿಸಿದರು.

ರಥೋತ್ಸವದ ಅಂಗವಾಗಿ ಮಂಗಳವಾರ ಮಧ್ಯಾಹ್ನ 1.30ಕ್ಕೆ ಉತ್ಸವ ಮೂರ್ತಿಯನ್ನು ಹೊರ

ತಂದು ವಿಶೇಷ ಪೂಜೆ ಸಲ್ಲಿಸಿ, ಅಡ್ಡಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ, ವೇದಮಂತ್ರಗಳೊಂದಿಗೆ ಉತ್ಸವ ನೆರವೇರಿಸಿದರು. ರಥದ ಪೂಜೆ ನಂತರ ಪುಷ್ಪಾಲಂಕೃತಗೊಂಡ ರಥದಲ್ಲಿ ಶ್ರೀಪಟ್ಟಾಭಿರಾಮಸ್ವಾಮಿ ಉತ್ಸವಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದರು. ಬಳಿಕ ಭಕ್ತರು ಹರ್ಷೋದ್ಗಾರದಿಂದ ಶ್ರೀರಾಮ್ ಜೈರಾಮ್ ಜೈಜೈ ರಾಮ್, ಗೋವಿಂದಾ, ಗೋವಿಂದಾ ಎನ್ನುತ್ತಾ ರಥವನ್ನು ಎಳೆಯುವ ಮೂಲಕ ರಥೋ ತ್ಸವಕ್ಕೆ ಸಾಕ್ಷಿಯಾ ದರು.

ರಥವನ್ನು ಎಳೆಯುವಾಗ ಮಹಿಳೆಯರು ಶ್ರೀರಾಮ ರಾಮನಾಥ ಪುರದಲ್ಲಿ ಶ್ರೀಪಟ್ಟಾಭಿರಾಮ ಸ್ವಾಮಿಯವರ ಮಹಾ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ಭಜನೆಯನ್ನು ಹಾಗೂ ಪುರುಷರು ವೇದಮಂತ್ರಗಳನ್ನು ಪಠಣ ಮಾಡುತ್ತಿದ್ದರು. ರಥ ಸಾಗಿದ ರಸ್ತೆಯಲ್ಲಿ ಎಲ್ಲಾ ಮನೆಯವರು ರಂಗೋಲಿ ಹಾಕಿ ಸಿಂಗರಿಸಿದ್ದರು. ಭಕ್ತರು ರಥಕ್ಕೆ ಈಡುಗಾಯಿ ಒಡೆದು ಹಣ್ಣುಕಾಯಿ ಅರ್ಪಿಸಿ ಭಕ್ತಿ ಭಾವ ಮೆರೆದರು.

ಕಳೆದ ಒಂದು ವಾರದಿಂದಲೂ ಪ್ರತಿ ಮನೆಗಳಲ್ಲಿಯೂ ರಥೋತ್ಸವದ ಅಂಗವಾಗಿ ವಿಶೇಷ ಪೂಜಾ ಕಾರ್ಯಗಳು ನೆರವೇರುತ್ತಲಿದ್ದವು. ವಿಶೇಷ ಮಡಿಯಿಂದ ದೇವರ ಪೂಜೆಯನ್ನು ಮಾಡಿ ವಿವಿಧ ರೀತಿಯ ಅಲಂಕಾರಗಳನ್ನು ಕೈಗೊಂಡು ಭಕ್ತಿಯಿಂದ ಹರಕೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಮುದಾಯದ ಮುಖಂಡರು, ಹಿರಿಯರು, ದೇವಾಲಯ ಸಮಿತಿಯವರು, ಸಾವಿರಾರು ಭಕ್ತರು ಹಾಜರಿದ್ದರು.

ಉಚಿತ ಮಾಸಿಕ ಕಿರು ಆರೋಗ್ಯ ತಪಾಸಣೆ

• ಪ್ರಜೋದಯ ವರದಿ

ಹಾಸನ: ನಗರದ ಸಾಲಗಾಮೆ ರಸ್ತೆ, ಕೃಷ್ಣ ಅಂಧ ಮಕ್ಕಳ ಶಾಲೆಯ ಹತ್ತಿರ, ಜಿಲ್ಲಾ ಖಜಾನೆ ಪಕ್ಕದಲ್ಲಿರುವ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ ಹಾಸನದ ಕಟ್ಟಡದಲ್ಲಿ ಏ.25 ರ ಶನಿವಾರ ಮಧ್ಯಾಹ್ನ 3 ಗಂಟೆಯಿಂದ ಸಂಜೆ 6 ರವರೆಗೆ ಉಚಿತ ಕಿರು ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ವೈದ್ಯರ ಶಿಫಾರಸ್ಸಿನ ಮೇರೆಗೆ ಉಚಿತ ಇಸಿಜಿ ತಪಾಸಣೆ, ಸಕ್ಕರೆ ಮಟ್ಟ, ರಕ್ತದೊತ್ತಡ, ಹಿಮೋಗ್ಲೋಬಿನ್ ಪರೀಕ್ಷೆ ಮತ್ತು ರಕ್ತದ ಗುಂಪು ಪರೀಕ್ಷೆಗಳನ್ನು ಕೂಡ ಮಾಡಲಾಗುತ್ತದೆ.

ಆರೋಗ್ಯ ಸಮಸ್ಯೆಗೆ ಸಂಬಧಿಸಿದತೆ ಭಾಗವಹಿಸಲು ಬಯಸುವವರು ಮುಂಚಿತವಾಗಿ ನೋಂದಣಿ ಮಾಡಿಸಿಕೊಳ್ಳಲು ಶಬ್ಬೀರ್ ಅಹಮದ್ (94494 60806), ಅವಿನಾಶ್ (8073 485 317) ಹಾಗೂ ಕಚೇರಿ (702244 4909) ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹವಾಮಾನ ಇಲಾಖೆ ಮಾಹಿತಿ: ಏ.28 ರವರೆಗೆ

ರಾಜ್ಯದಲ್ಲಿ ಸುಡುವ ಬಿಸಿಲ ಜತೆ ಮಳೆ

• ಪ್ರಜೋದಯ ವರದಿ

ಬೆಂಗಳೂರು: ರಾಜ್ಯದಲ್ಲಿ ಮುಂದಿನ ಒಂದು ವಾರ (ಏ.28 ರವರೆಗೆ) ಹವಾಮಾನದಲ್ಲಿ ಏರುಪೇರಾಗಲಿದ್ದು, ಕೆಲವು ಕಡೆ ಹಗುರ ಮಳೆಯಾದರೆ, ಬಹುತೇಕ ಜಿಲ್ಲೆಗಳಲ್ಲಿ ಬಿಸಿಲಿನ ತಾಪಮಾನ ಮತ್ತಷ್ಟು ಹೆಚ್ಚಾಗಲಿದೆ. ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರದಿಂದ ಉತ್ತರ ಕರ್ನಾಟಕದ 5 ಜಿಲ್ಲೆಗಳಿಗೆ ಆರೆಂಜ್, ಉತ್ತರ - ದಕ್ಷಿಣ ಒಳನಾಡಿನ 15 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಣೆ ಮಾಡಲಾಗಿದೆ.

ಆರೆಂಜ್ ಅಲರ್ಟ್: ಬೀದರ್, ಕಲಬುರಗಿ, ವಿಜಯಪುರ, ಬಾಗಲಕೋಟೆ, ಬೆಳಗಾವಿ.

ಹಳದಿ ಅಲರ್ಟ್: ಯಾದಗಿರಿ, ರಾಯಚೂರು, ಕೊಪ್ಪಳ, ಗದಗ, ಧಾರವಾಡ, ಉತ್ತರ ಕನ್ನಡ, ಹಾವೇರಿ, ದಾವಣಗೆರೆ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಮೈಸೂರು. ಈ ಜಿಲ್ಲೆಗಳಲ್ಲಿ ಆಲಿಕಲ್ಲು ಸಹಿತ ಮಳೆ ಬೀಳುವ ಸಾಧ್ಯತೆ ಇದೆ ಎಂದು ಕರ್ನಾಟಕ ರಾಜ್ಯ ವಿಪತ್ತು



ನಿರ್ವಹಣಾ ಕೇಂದ್ರ ಎಚ್ಚರಿಕೆ ನೀಡಿದೆ.

ಬೆಂಗಳೂರು ಹವಾಮಾನ ಕೇಂದ್ರದ ವಿಜ್ಞಾನಿ ಸಿ.ಎಸ್. ಪಾಟೀಲ್ ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಕರ್ನಾಟಕದ ಒಳನಾಡಿನಲ್ಲಿ ಸಮುದ್ರ ಮಟ್ಟದಿಂದ 0.9 ಕಿ.ಮೀ ಎತ್ತರದಲ್ಲಿ ಟ್ರಫ್ ಉಂಟಾಗಿದೆ. ಇದರ ಪ್ರಭಾವದಿಂದಾಗಿ ಕರಾವಳಿ, ಉತ್ತರ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳ ಶೇ. 25 ಪ್ರದೇಶಗಳಲ್ಲಿ ಮುಂಜಾನೆ ಗುಡುಗು, ಮಿಂಚು ಸಮೇತ ಹಗುರ ಮಳೆಯಾಗುವ ಸಾಧ್ಯತೆಯಿದೆ. ಮಳೆಯ ಜೊತೆಗೆ ಗಂಟೆಗೆ 30 ರಿಂದ 40 ಕಿ.ಮೀ. ವೇಗದಲ್ಲಿ ಬಿರುಗಾಳಿ ಬೀಸಲಿದ್ದು, ಮಳೆಯ ಮುನ್ಸೂಚನೆ ಇದ್ದರೂ ಸಹ ರಾಜ್ಯಾದ್ಯಂತ ಗರಿಷ್ಠ ತಾಪಮಾನ ಗಣನೀಯವಾಗಿ ಏರಿಕೆಯಾಗಲಿದೆ ಎಂದು ತಿಳಿಸಿದ್ದಾರೆ.

ಇಂದು ಎಸ್ಎಸ್ಎಲ್‌ಸಿ ಫಲಿತಾಂಶ

ಬೆಂಗಳೂರು: ಎಸ್ಎಸ್ಎಲ್‌ಸಿ ಫಲಿತಾಂಶವನ್ನು ಇಂದು (ಏ.23) ಮಧ್ಯಾಹ್ನ 12ಕ್ಕೆ ಪ್ರಕಟಿಸ ಲಾಗುವುದೆಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ತಿಳಿಸಿದೆ. ಫಲಿತಾಂಶವನ್ನು m ..i ppcsr+a-l pri– lc c nn ಮೂಲಕವೂ ಪಡೆಯಬಹುದಾಗಿದೆ. ವಿದ್ಯಾರ್ಥಿಗಳ ನೊಂದಾಯಿತ ಮೊಬೈಲ್ ಸಂಖ್ಯೆಗೆ ವಾಟ್ಸಾಪ್/ಎಸ್ಎಂಎಸ್ ಮೂಲಕವೂ ಮಾಹಿತಿರವಾನಿಸಲಾಗುವುದೆಂದು ಮಂಡಳಿ ತಿಳಿಸಿದೆ.

ರಾಜ್ಯದ 2,083 ಗ್ರಾಮಗಳಲ್ಲಿ ಫ್ಲೋರೈಡ್ ನೀರು

ನವದೆಹಲಿ: ಅಂತರ್ಜಲದಲ್ಲಿ ಆರ್ಸೆನಿಕ್ ಮತ್ತು ಫ್ಲೋರೈಡ್‌ನಂತಹ ವಿಷಕಾರಿ ಅಂಶಗಳ ಉಪಸ್ಥಿತಿ ಹೆಚ್ಚಾಗುತ್ತಿದೆ. ಕರ್ನಾಟಕದ 20 ಗ್ರಾಮಗಳಲ್ಲಿ ಆರ್ಸೆನಿಕ್ ಹಾಗು 2,083 ಹಳ್ಳಿಗಳಲ್ಲಿ ಫ್ಲೋರೈಡ್ ಪ್ರಮಾಣ ಕಂಡುಬಂದಿದೆಂದು ಕೇಂದ್ರ ಅಂತರ್ಜಲ ಮಂಡಳಿ ತಿಳಿಸಿದೆ. 25 ರಾಜ್ಯಗಳ 230 ಜಿಲ್ಲೆಗಳ ಅಂತರ್ಜಲದಲ್ಲಿ ಆರ್ಸೆನಿಕ್ ಮತ್ತು 27 ರಾಜ್ಯಗಳ 469 ಜಿಲ್ಲೆಗಳಲ್ಲಿ ಫ್ಲೋರೈಡ್ ಪತ್ತೆಯಾಗಿದೆ ಎಂದು ಮಾಧ್ಯಮದಲ್ಲಿ ವರದಿ ಪತ್ತೆಯಾಗಿತ್ತು. ವರದಿಯನ್ನು ಗಂಭೀರವಾಗಿ ಪರಿಗಣಿಸಿದ್ದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠವು, ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿತ್ತು. ನ್ಯಾಯ ಮಂಡ ಳಿಯು ಕರ್ನಾಟಕ ಸೇರಿ ಎಲ್ಲಾ ರಾಜ್ಯಗಳು ಹಾಗು ಕೇಂದ್ರಾ ಡಳಿತ ಪ್ರದೇಶಗಳಿಗೆ ನೋಟೀಸ್ ನೀಡಿ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿತ್ತು. ಈ ದಯನೀಯ ಪರಿಸ್ಥಿತಿ ಕುರಿತು ರಾಜ್ಯಗಳು ಎಚ್ಚೆತ್ತು ಕೊಳ್ಳದಿದ್ದರೆ ಮುಂದೆ ದುರ್ದಿನ ಎದುರಿಸಬೇಕಾ ಗುತ್ತದೆಂದು ಚಾಟಿ ಬೀಸಿತ್ತು. ರಾಜ್ಯದಲ್ಲಿ ಆರ್ಸೆನಿಕ್ ಹಾಗು ಫ್ಲೋರೈಡ್ ಅಂಶ ಇರುವ ಜಿಲ್ಲೆಗಳು ಯಾವುವು, ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳೇನು ಎಂಬುದರ ಬಗ್ಗೆ ರಾಜ್ಯ ಸರ್ಕಾರಗಳು ವರದಿ ಸಲ್ಲಿಸಿ ದ್ದವು. ರಾಜ್ಯ ಸರ್ಕಾರಗಳ ದತ್ತಾಂಶಗಳನ್ನು ವಿಶ್ಲೇಷಣೆ ನಡೆಸಿ ಕೇಂದ್ರ ಅಂತರ್ಜಲ ಮಂಡಳಿಯು ಎನ್‌ಜಿಟಿಗೆ ಸಮಗ್ರ ವರದಿ ಸಲ್ಲಿಸಿದೆ.

ಭಯೋತ್ಪಾದನೆ ವಿರುದ್ಧ ಹೋರಾಟ: ಭಾರತಕ್ಕೆ ಬೆಂಬಲ

ಇಸ್ರೇಲ್, ಅಮೇರಿಕಾದಿಂದ ಅಧಿಕೃತ ಹೇಳಿಕೆ | ಪಹಲ್ಗಾಮ್ ಘಟನೆಗೆ ಒಂದು ವರ್ಷ

• ಪ್ರಜೋದಯ ವರದಿ

ನವದೆಹಲಿ: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರ ಕೃತ್ಯಕ್ಕೆ ಒಂದು ವರ್ಷ ಪೂರೈಸಿದ್ದು ಭೀಕರ ದಾಳಿಯನ್ನು ಅಮೇರಿಕಾ ಹಾಗು ಇಸ್ರೇಲ್ ಖಂಡಿಸಿವೆ.

ಪಹಲ್ಗಾಮ್ ದು:ಖದಲ್ಲಿ ಭಾಗಿಯಾಗಿರುವ ಇಸ್ರೇಲ್ ಕೂಡ, ಭಯೋತ್ಪಾದನೆ ವಿರುದ್ಧದ ಭಾರತದ ಹೋರಾಟಕ್ಕೆ ಸದಾ ಬೆಂಬಲ ನೀಡುವುದಾಗಿ ಘೋಷಿಸಿದೆ. ಅಮೇರಿಕಾ ಕೂಡ ಅದೇ ವಾಗ್ದಾನ ಮಾಡಿದೆ.

ಈ ಕುರಿತು ತಮ್ಮ ಅಧಿಕೃತ ಎಕ್ಸ್ ಖಾತೆ ಯಲ್ಲಿ ಪೋಸ್ಟ್ ಮಾಡಿರುವ ಅಮೇರಿಕಾ ರಾಯ ಭಾರಿ ಸೆರ್ಗಿಯೋ ಗೋರ್ ಅವರು, ಪಹಲ್ಗಾಮ್‌ನಲ್ಲಿ ನಡೆದ ಭೀಕರ ದಾಳಿಯ ಮೊದಲ ವಾರ್ಷಿಕೋತ್ಸವದಂದು ನಾವು ಅಮಾಯಕ ಬಲಿಪಶುಗಳನ್ನು ನೆನಪಿಸಿಕೊಳ್ಳುತ್ತೇವೆ. ಅವರ ಕುಟುಂಬದ ದು:ಖದಲ್ಲಿ ಭಾಗಿಯಾಗುತ್ತೇವೆ. ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಅಮೇರಿ ಕಾವು ಭಾರತದ ಜನರೊಂದಿಗೆ ನಿಂತಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಕಳೆದ ವರ್ಷ ಏ. 22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 26 ನಾಗರಿಕರು ಸಾವನ್ನಪ್ಪಿ ದ್ದರು. ಭಯೋತ್ಪಾದಕರು ಬಲಿ ಪಶುಗಳನ್ನು ಧರ್ಮದ ಆಧಾರದ ಮೇಲೆ ಬೇರ್ಪಡಿಸಿ ಅವರ ಕುಟುಂಬಗಳ ಮುಂದೆ ಗುಂಡು ಹಾರಿಸಿದ್ದರು. ಅದು ದೇಶಾದ್ಯಂತ ಆಕ್ರೋಶಕ್ಕೆ ಕಾರಣವಾಗಿತ್ತು.

ಮಡಿದ ಜೀವಗಳ ಸ್ಮರಿಸಿದ ಇಸ್ರೇಲ್

ಜೆರುಸಲೇಂ: ಎಲ್ಲಾ ವಿಧದ ಭಯೋತ್ಪಾದನೆ ವಿರುದ್ಧ ದೇಶವು ದೃಢ ಮತ್ತು ಅಚಲವಾಗಿ ಭಾರತದೊಂದಿಗೆ ನಿಲ್ಲಲಿದೆ ಎಂದು ಇಸ್ರೇಲ್ ತಿಳಿಸಿದೆ. ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಒಂದು ವರ್ಷ ವಾಗಿದ್ದು, ದಾಳಿಯಲ್ಲಿ ಮಡಿದ ಮುಗ್ಧ ಜೀವಗಳನ್ನು ಸ್ಮರಿಸುತ್ತೇವೆ ಮತ್ತು ಸಂತ್ರಸ್ತರ ಕುಟುಂಬದ ಪರವಾಗಿ ನಿಲ್ಲುತ್ತೇವೆಂದು ಇಸ್ರೇಲ್ ವಿದೇಶಾಂಗ ಸಚಿವ ಗಿದಾನ್ ಸಾರ್ ಅವರು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಹೇಳಿದ್ದಾರೆ.

ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ಭಾರತವು ಮೇ 7ರಂದು ಗಡಿಯುದ್ದಕ್ಕೂ ಭಯೋತ್ಪಾದಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಆಪರೇಷನ್ ಸಿಂದೂರ ಸೇನಾ ಕಾರ್ಯಾಚರಣೆಯನ್ನು ಪ್ರಾರಂಭಿಸಿತು.ಅಧಿಕೃತ ವಿವರಗಳ ಪ್ರಕಾರ, ಲಷ್ಕರ್-ಎ-ತೋಯ್ಬಾ, ಜೈಶ್-ಎ- ಮೊಹಮ್ಮದ್ ಮತ್ತು ಹಿಜ್ಬುಲ್ ಮುಜಾಹಿ ದ್ದೀನ್ ನಂತಹ ಗುಂಪುಗಳೊಂದಿಗೆ ಸಂಪರ್ಕ ಹೊಂದಿರುವ 9 ಪ್ರಮುಖ ಭಯೋತ್ಪಾದಕ ತಾಣಗಳನ್ನು ನಾಶಪಡಿಸಲಾಯಿತು. 100ಕ್ಕೂ ಹೆಚ್ಚು ಭಯೋತ್ಪಾದಕರನ್ನು ನಿರ್ಮೂಲನೆ ಮಾಡಲಾಯಿತು.

ಈ ಕಾರ್ಯಾಚರಣೆಯು ಪಾಕಿಸ್ತಾನದಿಂದ ಪ್ರತೀಕಾರದ ಕ್ರಮಕ್ಕೆ ಕಾರಣವಾಯಿತು. ಅದರಲ್ಲಿ ಡ್ರೋನ್ ದಾಳಿ ಮತ್ತು ಗಡಿಯಾಚೆಗಿನ ಶೆಲ್ ದಾಳಿಯೂ ಸೇರಿತ್ತು. ಪರಿಣಾಮವಾಗಿ ನಾಲ್ಕು ದಿನಗಳ ಕಾಲ ಭಾರತ ಮತ್ತು ಪಾಕಿಸ್ತಾನ ನಡುವೆ ಸಂಕ್ಷಿಪ್ತ ಮಿಲಿಟರಿ ಸಂಘರ್ಷ ನಡೆದು, ಮೇ 10 ರಂದು ಭಾರತ ಮತ್ತು ಪಾಕಿಸ್ತಾನ ನಡುವೆ ದ್ವಿಪಕ್ಷೀಯ ಕದನ ವಿರಾಮ ಒಪ್ಪಂದ ಜಾರಿ ಯಾಗಿತ್ತು. ಆ ಬಳಿಕ 28 ಜುಲೈ 2025ರಂದು ನಡೆದ ಆಪರೇಷನ್ ಮಹಾದೇವ ಸೇನಾ ಕಾರ್ಯಾಚರಣೆ ಸಮಯದಲ್ಲಿ, ಪಹಲ್ಗಾಮ್ ದಾಳಿಯಲ್ಲಿ ಭಾಗಿಯಾಗಿದ್ದ ಮೂವರು ಉಗ್ರರನ್ನು ಭಾರತೀಯ ಸೇನೆ ಹೊಡೆದುರು ಳಿಸಿತ್ತು. ಪಹಲ್ಗಾಮ್ ದಾಳಿಗೆ ಒಂದು ವರ್ಷ ಸಂದ ಹಿನ್ನಲೆಯಲ್ಲಿ, ಜಗತ್ತಿನ ಅನೇಕ ರಾಷ್ಟ್ರಗಳು ಭಾರತಕ್ಕೆ ಬೆಂಬಲ ವ್ಯಕ್ತಪಡಿಸಿರು ವುದು ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ.

ಪ್ರಧಾನಿ ಮೋದಿ ಸಂತಾಪ: ಪಹಲ್ಗಾಮ್ ಸಂತ್ರಸ್ತರಿಗೆ ಪ್ರಧಾನಿ ಮೋದಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಅಲ್ಲದೇ ಭಾರತದ ವಿರುದ್ಧ ಭಯೋತ್ಪಾದಕರ ಕುತಂತ್ರಗಳನ್ನು ಸಮಸ್ತ ಭಾರತೀ ಯರು ಒಗ್ಗಟ್ಟಿನಿಂದ ವಿಫಲಗೊಳ ಸುತ್ತಾರೆಂದು ಪ್ರಧಾನಿ ಮೋದಿ ಭರವಸೆ ನೀಡಿದ್ದಾರೆ.

99 ಸಾವಿರ ರೂ. ಮೌಲ್ಯದ ರಿಲೇ ಕಳವು : ಬಂಧನ

• ಪ್ರಜೋದಯ ವರದಿ

ಹಾಸನ: ರೈಲ್ವೆ ಪೊಲೀಸರ ಕಣ್ತಪ್ಪಿಸಿ ಸ್ಟೋರ್ ರೂಮಿನಲ್ಲಿಟ್ಟಿದ್ದ 99 ಸಾವಿರ ರೂ. ಮೌಲ್ಯದ ರಿಲೇಗಳನ್ನು ಕದ್ದು ಗುಜರಿ ಅಂಗಡಿಗೆ ಮಾರಾಟ ಮಾಡಿದ್ದ ಇಬ್ಬರನ್ನು ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಬಂಧಿಸಿದೆ.

ನಗರದ ಶ್ರೀರಾಮು ಹಾಗು ಮತ್ತೊಬ್ಬ ಬಂಧಿತರು. ಏ.21ರ ಬೆಳಿಗ್ಗೆ 5.20ರ ಸಮಯದಲ್ಲಿ ಆರ್‌ಪಿಎಫ್ ಸಿಬ್ಬಂದಿ ರೈಲ್ವೆ ಇನ್ಸ್ಟಿಟ್ಯೂಟ್ ಸಮೀಪ ಪೆಟ್ರೋಲಿಂಗ್ ನಡೆಸುತ್ತಿದ್ದಾಗ ನಂಬರ್ ಪ್ಲೇಟ್ ಇಲ್ಲದ ಬೈಕ್‌ನಲ್ಲಿ ಸಂಚರಿಸು ತ್ತಿದ್ದ ಶ್ರೀರಾಮು ಹಾಗು ಮತ್ತೊಬ್ಬನ ಮೇಲೆ ಸಂಶಯ ಬಂದು ವಿಚಾರಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ಬೈಕ್‌ನಲ್ಲಿ ಸುತ್ತಿಗೆ ಹಾಗು ಲೋಹದ ತುಂಡು ಪತ್ತೆಯಾಗಿದೆ. ಕಳ್ಳತನದ ಉದ್ದೇಶದಿಂದಲೇ ರಾತ್ರಿ ಪೂರ್ತಿ ಓಡಾಡಿಕೊಂಡಿದ್ದು, ಕಾರ್ಯಸಾಧನೆ ಸಾಧ್ಯವಾಗದ ಹಿನ್ನಲೆಯಲ್ಲಿ ಮನೆಗೆ ಹೋಗುತ್ತಿದ್ದಾಗ ಸಿಕ್ಕಿಬಿದ್ದಿದ್ದಾನೆ.

15 ದಿನಗಳ ಹಿಂದೆ ರೈಲ್ವೆ ಸ್ಟೋರ್ ರೂಮ್‌ನ ಬೀಗ ಒಡೆದು ರಿಲೇಗಳನ್ನು ಕಳವು ಮಾಡಿ ಗೌರಿಕೊಪ್ಪಲಿನಲ್ಲಿರುವ ಗುಜರಿ ಅಂಗಡಿಗೆ ಕೇವಲ 8 ಸಾವಿರ ರೂ.ಗೆ ಮಾರಾಟ ಮಾಡಿದ್ದ. ಅದರ ಒಟ್ಟು ಮೌಲ್ಯ 99 ಸಾವಿರ ರೂ. ಆಗಿದ್ದು ಪೊಲೀಸರು ವಶಕ್ಕೆ ಪಡೆದಿದ್ದಾರೆಂದು ಮೈಸೂರು ವಿಭಾಗೀಯ ಹಣಕಾಸು ವ್ಯವಸ್ಥಾಪಕ ಹಾಗು ಸಾರ್ವಜನಿಕ ಸಂಪರ್ಕಾಧಿಕಾರಿ ಪೃಥ್ವಿ ಎಸ್.ಹುಲ್ಲತ್ತಿ ಅವರು ತಿಳಿಸಿದ್ದಾರೆ.

ಕಾರು ಡಿಕ್ಕಿ: ಬೈಕ್ ಸವಾರ ಸಾವು

• ಪ್ರಜೋದಯ ವರದಿ

ಹೊಳೆನರಸೀಪುರ: ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಪೆದ್ದನಹಳ್ಳಿ ಸಮೀಪ ಬುಧವಾರ ನಡೆದಿದೆ.

ತಾಲ್ಲೂಕಿನ ಚಿಕ್ಕಕಾಡನೂರು ಗ್ರಾಮದ ಯೋಗೀಶ್ (35) ಮೃತರು. ಜೆಸಿಬಿ ಚಾಲಕರಾಗಿದ್ದ ಅವರು ಬೈಕ್‌ನಲ್ಲಿ ಬರುತ್ತಿದ್ದಾಗ ಎದುರುಗಡೆಯಿಂದ ಬಂದ ಕಾರು ಡಿಕ್ಕಿಯಾಗಿದೆ.

ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಿಡಗ ಕೃಷಿ ಪತ್ತಿನ ಸಂಘಕ್ಕೆ ಯೋಗೇಶ್ ಅಧ್ಯಕ್ಷ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನ ದಿಡಗ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯರಾಗಿ ಉಳ್ಳಾವಳ್ಳಿ ಗ್ರಾಮದ ಹೆಚ್.ಕೆ.ಯೋಗೇಶ್ 3ನೇ ಬಾರಿಗೆ ಅವಿರೋಧ ಆಯ್ಕೆಯಾದರು.

ಅಧ್ಯಕ್ಷ ಸ್ಥಾನಕ್ಕೆ ಹೆಚ್.ಕೆ.ಯೋಗೇಶ್ ಹೊರತು ಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನಲೆಯಲ್ಲಿ ತಾಲ್ಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ವಿಜಯೇಂದ್ರ ಅವಿರೋಧ ಆಯ್ಕೆ ಘೋಷಿಸಿದರು.

ನೂತನ ಅಧ್ಯಕ್ಷ ಹೆಚ್.ಕೆ.ಯೋಗೇಶ್ ಅವರು ಮಾತನಾಡಿ, ಶಾಸಕ ಸಿ.ಎನ್.ಬಾಲಕೃಷ್ಣ ಅವರ ಮಾರ್ಗದರ್ಶನ ಹಾಗು ಸಂಘದ ಎಲ್ಲಾ ನಿರ್ದೇಶಕರ ಸಹಕಾರದೊಂದಿಗೆ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದೆಂದರು.

ಸಂಘವು 3,200 ಷೇರುದಾರ ಸದಸ್ಯರನ್ನು ಹೊಂದಿದ್ದು, ಕೆಸಿಸಿ 13.64 ಕೋಟಿ ರೂ. ಹಾಗು ಹೆಚ್ಎಸ್‌ವಿ 2.44 ಕೋಟಿ ರೂ. ಸೇರಿ 16 ಕೋಟಿ ರೂ. ಸಾಲ ಸೌಲಭ್ಯ ನೀಡಲಾಗಿದೆ. ಇನ್ನೂ 3 ಕೋಟಿ ರೂ. ಅಗತ್ಯವಿದ್ದು, ಶಾಸಕರಿಗೆ ಮನವಿ ಮಾಡಲಾಗಿದೆ. ಶೀಘ್ರದಲ್ಲಿಯೇ ಹೆಚ್ಚಿನ ಅನುದಾನ ತಂದು ಷೇರುದಾರ ಸದಸ್ಯರಿಗೆ ಒದಗಿಸಲಾಗುವುದೆಂದು ಭರವಸೆ ನೀಡಿದರು.

ವ್ಯಾಪ್ತಿಯ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಹೈನುಗಾರಿಕೆಯಲ್ಲಿ ತೊಡಗಿದ್ದು ಶೂನ್ಯ ಬಡ್ಡಿದರದಲ್ಲಿ ಅಗತ್ಯ ಸಾಲ ಸೌಲಭ್ಯ ಕಲ್ಪಿಸಿದರೆ ಸಹಕಾರಿಯಾಗಲಿದೆ. ಕೇವಲ 10 ಗುಂಟೆ ಜಮೀನು ಹೊಂದಿರುವ ರೈತರಿಗೂ ಸಹ ಸಾಲ ನೀಡುವ ವ್ಯವಸ್ಥೆ ಜಾರಿಗೊಳಿಸಲಾಗಿದೆಯೆಂದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಪುಟ್ಟರಾಜು, ಎಂ.ಆರ್.ವಾಸು, ಎಪಿಎಂಸಿ ಮಾಜಿ ಅಧ್ಯಕ್ಷ ಉಗೇನಹಳ್ಳಿ ರಘುರಾಂ, ಸಂಘದ ಮಾಜಿ ಅಧ್ಯಕ್ಷ ತಾತೇಗೌಡ, ಉಪಾಧ್ಯಕ್ಷ ಕುಮಾರ್, ನಿರ್ದೇಶಕರಾದ ಟಿ.ಎಸ್.ಮಧು, ಬಾಲು, ಹೆಚ್.ಎಸ್.ಮಹೇಶ್, ಲೋಕೇಶ್, ವೆಂಕಟೇಶ್, ಜಯಮ್ಮ, ಸುಮಿತ್ರ, ತುಳಸಿ, ಕಾರ್ಯನಿರ್ವಹಣಾಧಿಕಾರಿ ನಿಂಗಮ್ಮ, ಸಿಬ್ಬಂದಿ ವರ್ಗ ಹಾಗು ಇತರರು ಇದ್ದರು.

ಬಿಹಾರದ ಮುಗ್ಧ ಮಕ್ಕಳಿಗೆ ಕನ್ನಡವೇ ಅಚ್ಚು ಮೆಚ್ಚು

» ಮೊದಲನೇ ಪುಟದಿಂದ

ಅವರು ಎಲ್ಲವನ್ನೂ ನಿಬಾಯಿಸಿದ್ದಾರೆ. ಮೊದಲು ಗ್ರಾಮಸ್ಥರು ಸಹ ಈ ರಿಸ್ಕ್ ನಿಮಗೆ ಬೇಕಾ ಎಂದು ಪ್ರಶ್ನಿಸಿದ್ದರಂತೆ. ಆದರೆ, ಹೀಗೆ ಬಿಟ್ಟರೆ ಈ ಮಕ್ಕಳು ಚಿಂದಿ ಆಯುತ್ತಾರೆ ಅಥವಾ ಅಜ್ಞಾನದಿಂದ ತಪ್ಪು ಮಾರ್ಗ ತುಳಿಯುವ ಸಾಧ್ಯತೆ ಇದೆ. ಪ್ರಜ್ಞಾವಂತರಾಗಿರುವ ನಾವು ಕೈಲಾದ ಸಹಾಯ ಮಾಡೋಣವೆಂದು ಎಲ್ಲರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕನ್ನಡದಲ್ಲಿ ಮಕ್ಕಳ ಪಾಂಡಿತ್ಯ

ಪ್ರಸ್ತುತ 6 ಹೆಣ್ಣು ಹಾಗು ಇಬ್ಬರು ಗಂಡು ಮಕ್ಕಳು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಎಲ್ಲರೂ ಸುಲಲಿತವಾಗಿ ಕನ್ನಡ ಮಾತನಾಡುತ್ತಾರೆ. ವಚನಗಳ ಓದುವಿಕೆ, ಕಥೆ, ಕವನ ಹೇಳುವುದು. ಪ್ರಾರ್ಥನಾ ಗೀತೆಗೆ ಬಿಹಾರದ ಮಕ್ಕಳೇ ಮೊದಲ ಸಾಲಿನಲ್ಲಿರುತ್ತಾರೆ. ನಮ್ಮ ಅಪ್ಪ-ಅಮ್ಮ ಚಿಂದಿ ಆಯುತ್ತಾರೆ, ನಾವು ಸೈನಿಕರಾಗುತ್ತೇವೆ, ವೈದ್ಯ, ಶಿಕ್ಷಕ ಹೀಗೆ ತಮ್ಮದೇಯಾದ ಕನಸುಗಳನ್ನು ಬಿಚ್ಚಿಡುತ್ತಾರೆ. ಆರ್ಥಿಕವಾಗಿ ತೀರಾ ದುರ್ಬಲರಾಗಿರುವ ವಿದ್ಯಾರ್ಥಿಗಳಿಗೆ ಗ್ರಾಮಸ್ಥರೇ ಯೂನಿ ಫಾರ್ಮ್, ನೋಟ್‌ಬುಕ್ ಸೇರಿ ಅಗತ್ಯ ಸೌಕರ್ಯ ಕಲ್ಪಿಸುತ್ತಿದ್ದಾರೆ. ತಿಂಗಳಿಗೆ 8 ಸಾವಿರ ರೂ. ಆಟೋ ಬಾಡಿಗೆಯನ್ನು ಶಿಕ್ಷಕಿ ಪ್ರಮೀಳಾ ಭರಿ ಸುತ್ತಿದ್ದಾರೆ. ಮಾಡುವ ಕೆಲಸದಲ್ಲಿ ಶ್ರದ್ದೆ ಇದ್ದರೆ ಇಂತಹ ಸಕಾರಾತ್ಮಕ ಬದ ಲಾವಣೆಗಳು ಸಾಧ್ಯ ಎಂಬುದಕ್ಕೆ ಶಿಕ್ಷಕಿ ಪ್ರಮೀಳಾ ಅವರು ಸಾಕ್ಷಿಯಾಗಿದ್ದಾರೆ.

ನಾಳೆ ಜೈ ಸತ್ಯಂ ಮಕ್ಕಳ ಚಲನಚಿತ್ರ ತೆರೆಗೆ

• ಪ್ರಜೋದಯ ವರದಿ

ಹಾಸನ: ಮೊಬೈಲ್ ಬಳಕೆಯ ದುಷ್ಪರಿಣಾಮದ ಕಥಹಂದರ ಹೊಂದಿರುವ ಜೈ ಸತ್ಯಂ ಮಕ್ಕಳ ಚಲನಚಿತ್ರ ಏ.24ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಕೆ.ಈಶ್ವರಬಾಬು ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ, ಕಂಚಮಾರನಹಳ್ಳಿ ಮತ್ತು ರಾಯಪುರ ಮೊದಲಾದ ಕಡೆಗಳಲ್ಲಿ ಚಿತ್ರೀಕರಣ ಮಾಡಲಾಗಿದೆ. ಒಟ್ಟು ಐದು ಹಾಡುಗಳಿವೆ. ಸಿನಿಮಾ ಅವಧಿ 1.33 ಗಂಟೆಯಾಗಿದೆ. ಈ ಚಿತ್ರವು ನಗರ ಪಿಕ್ಚರ್‌ಪ್ಯಾಲೇಸ್ ಚಿತ್ರಮಂದಿರದಲ್ಲಿ ಬಿಡುಗಡೆಯಾಗಲಿದೆ. 50 ರೂ. ಟಿಕೆಟ್ ದರವನ್ನು ನಿಗದಿ ಮಾಡಲಾಗಿದೆ ಎಂದು ಹೇಳಿದರು.

ಚಿತ್ರದಲ್ಲಿ ಮಕ್ಕಳ ಪ್ರತಿಭೆ ಉತ್ತೇಜಿಸುವ ಉದ್ದೇಶದಿಂದ ಸ್ಥಳೀಯ ಮಕ್ಕಳಿಗೆ ಹೆಚ್ಚಿನ ಅವಕಾಶ ನೀಡಲಾಗಿದೆ. ಜೈ ಮತ್ತು ಸತ್ಯಂ ಎಂಬ ಎರಡು ವಿಭಿನ್ನ ವ್ಯಕ್ತಿತ್ವಗಳ ಮೂಲಕ ಜೀವನದ ಮಹತ್ವ ತೋರಿಸಲಾಗಿದೆ. ಜೈ ಎಂಬ ಶ್ರೀಮಂತ ಬಾಲಕನಿಗೆ ಎಲ್ಲವೂ ಸುಲಭವಾಗಿ ಸಿಗುವುದರಿಂದ ಅವನಲ್ಲಿ ಗರ್ವ ಮತ್ತು ವ್ಯಸನ ಬೆಳೆಯುತ್ತದೆ. ಇನ್ನೊಂದೆಡೆ, ಬಡ ಕುಟುಂಬದ ಸತ್ಯಂ ಎಂಬ ಬಾಲಕ ಶ್ರಮ, ಶಿಸ್ತು ಮತ್ತು ದೃಢ ನಿಶ್ಚಯದಿಂದ ಮುಂದೆ ಸಾಗುತ್ತಾನೆ. ಇದು ಸಿನಿಮಾದ ವಸ್ತು ಎಂದರು.

ಮೊಬೈಲ್ ಬಳಕೆ ಬಗ್ಗೆ ಪೋಷಕರು ಮತ್ತು ಮಕ್ಕಳಿಗೆ ತಿಳುವಳಿಕೆ ನೀಡುವ ಉದ್ದೇಶದಿಂದ ಜೈ ಸತ್ಯಂ ಚಿತ್ರ ನಿರ್ಮಾಣ ಮಾಡಲಾಗಿದೆ. ಇದು ಮಕ್ಕಳಿಗೆ ಮಾರ್ಗದರ್ಶನ ಮತ್ತು ಪೋಷಕರಿಗೆ ಪ್ರೇರಣೆ ನೀಡುವ ಉದ್ದೇಶ ಹೊಂದಲಾಗಿದೆ. ಇಂದಿನ ಯುಗದಲ್ಲಿ ಮಕ್ಕಳು ಅತಿಯಾದ ಮೊಬೈಲ್ ಬಳಕೆಯಿಂದ ಜೀವನದ ನಿಜವಾದ ಮೌಲ್ಯಗಳನ್ನು ಮರೆಯುತ್ತಿದ್ದಾರೆ. ಮೊಬೈಲ್‌ನ್ನು ಮಿತವಾಗಿ ಬಳಸಿ ಎಂದು ತಿಳುವಳಿಕೆ ನೀಡುವುದು ಜೊತೆಗೆ ಪೋಷಕರಲ್ಲೂ ಜಾಗೃತಿ ಮೂಡಿಸುವುದುನಮ್ಮ ಉದ್ದೇಶ ಎಂದರು. ನಿರ್ಮಾಪಕ ಮಧು, ಹರೀಶ್, ಗೋಪಾಲ್, ಶಿವಪ್ಪನಾಯಕ, ರವಿ ಕುಮಾರ್ ಇದ್ದರು.

ಮೃತ ಮೋನಿಕಾ ಮನೆಗೆ ಶಾಸಕ ಶಿವಲಿಂಗೇಗೌಡ ಭೇಟಿ

• ಪ್ರಜೋದಯ ವರದಿ

ಅರಸೀಕೆರೆ: ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟು ಅಂಗಾಂಗ ದಾನ ಮಾಡಿದ್ದ ತಾಲ್ಲೂಕಿನ ಕಾರೆಹಳ್ಳಿ ತಾಂಡ್ಯದ ಯುವತಿ ಮೋನಿಕಾ ಅವರ ಮನೆಗೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಬುಧವಾರ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮೋನಿಕಾ ಅವರ ಕುಟುಂಬ ಆರ್ಥಿಕವಾಗಿ ತೀರಾ ಹಿಂದುಳಿದಿದೆ. ಚಿಕ್ಕ ಮನೆಯಲ್ಲಿ ತಾಯಿ ಜೊತೆಗೆ ಯುವತಿ ವಾಸವಿದ್ದಳು. ಕುಟುಂಬದ ಚಿಂತಾಜನಕ ಸ್ಥಿತಿಯನ್ನು ಅರಿತ ಶಾಸಕರು ವೈಯಕ್ತಿಕವಾಗಿ 25 ಸಾವಿರ ರೂ. ಆರ್ಥಿಕ ನೆರವು ನೀಡಿದರು.

ಈ ವೇಳೆ ಮಾತನಾಡಿದ ಕೆ.ಎಂ. ಶಿವಲಿಂಗೇಗೌಡ ಅವರು, ತಮ್ಮ ಬದುಕಿನ ಕೊನೆಯ ಕ್ಷಣದಲ್ಲಿಯೂ ಇತರರ ಬಾಳಿಗೆ ಬೆಳಕಾದ ಮೋನಿಕಾ ಅವರ ಕಾರ್ಯ ಶ್ಲಾಘನೀಯ. ಕುಟುಂಬಸ್ಥರ ತ್ಯಾಗ ಮತ್ತು ದಾನ ಮನೋ ಭಾವ ಸಮಾಜಕ್ಕೆ ಮಾದರಿಯಾಗಿದೆ. ಅಂಗಾಂಗ ದಾನದ ಮಹತ್ವವನ್ನು ಸಾರಿದ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕಂಬನಿ ಮಿಡಿದರು.

ಕುಟುಂಬಕ್ಕೆ ವೈಯಕ್ತಿಕ ನೆರವು ನೀಡಿದ ಬೆನ್ನಲ್ಲೇ ಸರ್ಕಾರದಿಂದ ಸಿಗಬೇಕಾದ ಪರಿಹಾರ ಮತ್ತು ಸೌಲಭ್ಯಗಳನ್ನು ಕೊಡಿಸುವ ಭರವಸೆ ನೀಡಿದರು.

ವ್ ೦ ೦ ಖ ೦ ಡ ' ರ ಾ ದ ' ಮಂಜುನಾಥ್, ಸುನಿಲ್ ನಾಯ್ಕ್, ಈಶ್ವರ್ ನಾಯ್ಕ್, ಕೃಷ್ಣನಾಯ್ಕ ಹಾಗು ಬಂಜಾರ ಸಮುದಾಯದ ಮುಖಂಡರು ಹಾಜರಿದ್ದರು.

ಮೇ 2 ರಂದು ಪುತ್ತೂರಿನಲ್ಲಿ ಮಾದರಿ ಮದುವೆ ಅಭಿಯಾನ

• ಪ್ರಜೋದಯ ವರದಿ

ಸಕಲೇಶಪುರ: ಮದುವೆ ಎನ್ನುವುದು ಎರಡು ಹೃದಯಗಳ ಹಾಗೂ ಎರಡು ಕುಟುಂಬಗಳ ಪವಿತ್ರ ಬಂಧನವಾಗಿದ್ದು, ಅದು ಪ್ರತಿಷ್ಠೆ ಮೆರೆಯುವ ಪ್ರದರ್ಶನದ ವೇದಿಕೆಯಾಗಬಾರದೆಂದು ಕರ್ನಾಟಕ ರಾಜ್ಯ ಸುನ್ನೀ ಯುವಜನ ಸಂಘ (ಎಸ್‌ವೈಎಸ್) ರಾಜ್ಯಾಧ್ಯಕ್ಷ ಬಶೀರ್ ಸಅದಿ ಬೆಂಗಳೂರು ಅವರು ಹೇಳಿದರು.

ಪಟ್ಟಣದಲ್ಲಿ ಆಯೋಜಿಸಲಾಗಿದ್ದ ಮಾದರಿ ಮದುವೆ ಅಭಿಯಾನದ ಸಮಾರೋಪ ಸಮ್ಮೇಳನದ ಪ್ರಚಾರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮದುವೆಗಳು ಸಂತೃಪ್ತಿದಾಯಕವಾಗಿ, ಸಭ್ಯವಾಗಿ ಮತ್ತು ಅನಾಚಾರಮುಕ್ತವಾಗಿ ನಡೆಯ ಬೇಕು. ಇತ್ತೀಚಿನ ದಿನಗಳಲ್ಲಿ ಮದುವೆಗಳು ಪ್ರತಿಷ್ಠೆಯ ಪ್ರದರ್ಶನ ಮತ್ತು ಹೊಸ ಹೊಸ ಆಚರಣೆಗಳಿಂದ ಭಾರವಾಗುತ್ತಿರುವುದು ವಿಷಾದ ನೀಯ. ಅದರ ಪರಿಣಾಮವಾಗಿ ಅನೇಕ ಬಡ ಕುಟುಂಬಗಳು ಸಾಲ ಬಾಧೆ ಸೇರಿ ವಿವಿಧ ಸಂಕಷ್ಟಗಳಿಗೆ ಒಳಗಾಗುತ್ತಿವೆ. ಈ ಹಿನ್ನಲೆಯಲ್ಲಿ ಜನಜಾಗೃತಿ ಮೂಡಿಸುವ ಉದ್ದೇಶದಿಂದ ಎಸ್‌ವೈಎಸ್ ವತಿಯಿಂದ ಮಾದರಿ ಮದುವೆ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ಸಮಾಜದಲ್ಲಿ ದಿನೇದಿನೇ ಹೆಚ್ಚುತ್ತಿರುವ ದುಂದು ವೆಚ್ಚ, ಆಡಂಬರ ಮತ್ತು ಅನಗತ್ಯ ಆಚರಣೆಗಳಿಂದ ಕುಟುಂಬಗಳು ಎದುರಿಸುತ್ತಿರುವ ಸಂಕಷ್ಟಗಳನ್ನು ಮನಗಂಡು, ಸರಳತೆ ಮತ್ತು ಸಂಸ್ಕಾರಯುತ ಮೌಲ್ಯಗಳ ಆಧಾರದಲ್ಲಿ ಮದುವೆಗಳನ್ನು ನಡೆಸಬೇಕೆಂದರು.

ರಾಜ್ಯ ಕಾರ್ಯದರ್ಶಿ ಹಸೈನಾರ್ ಆನೆಮಹಲ್ ಮಾತನಾಡಿ, ಮೇ 2ರಂದು ಪುತ್ತೂರಿನಲ್ಲಿ ಮಾದರಿ ಮದುವೆ ಅಭಿಯಾನದ ಬೃಹತ್ ಸಮಾರೋಪ ಸಮಾರಂಭ ನಡೆಯಲಿದ್ದು, ಕಾರ್ಯಕ್ರಮದಲ್ಲಿ ಇಂಡಿಯನ್ ಗ್ರ್ಯಾಂಡ್ ಮುಫ್ತಿ ಸುಲ್ತಾನುಲ್ ಉಲಮಾ ಎ.ಪಿ. ಅಬೂಬಕ್ಕರ್ ಮುಸ್ಲಿಯಾರ್ ಕಾಂತಪುರಂ ಭಾಗವಹಿಸಲಿದ್ದಾರೆ. ಸಮಾವೇಶದಲ್ಲಿ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಬೇಕೆಂದು ಮನವಿ ಮಾಡಿದರು.

ಎಸ್‌ವೈಎಸ್ ಜಿಲ್ಲಾಧ್ಯಕ್ಷ ರಶೀದ್ ಮುಸ್ಲಿಯಾರ್ ಅಧ್ಯಕ್ಷತೆ ವಹಿಸಿದ್ದರು. ಜಂಇಯತುಲ್ ಉಲಮಾ ಜಿಲ್ಲಾಧ್ಯಕ್ಷ ಸೈದಲವಿ ಸಖಾಫಿ, ಎಸ್‌ವೈಎಸ್ ರಾಜ್ಯ ಉಪಾಧ್ಯಕ್ಷ ಅಬ್ದುರ್ರಹ್ಮಾನ್ ರಝ್ವಿ (ಉಡುಪಿ), ರಾಜ್ಯ ಕಾರ್ಯದರ್ಶಿ ಮಹಮ್ಮದ್ ಅಲಿ ಸಖಾಫಿ ಅಶ್‌ಅರಿಯಾ, ಜಿಲ್ಲಾ ಕಾರ್ಯದರ್ಶಿ ಖಲೀಲ್ ದೇಖ್ಲಿ, ಪ್ರಮುಖರಾದ ಶರಫುದ್ದೀನ್ ತಂಙಳ್, ಸಲೀಂ ಕನ್ಯಾಡಿ, ಶರೀಫ್ ಮಿಸ್ಬಾಹಿ, ಝುಕರಿಯಾ ಹಾಸನ ಉಪಸ್ಥಿತರಿದ್ದರು.

ಸಕಲೇಶಪುರದಲ್ಲಿ ಏ.25-26ಕ್ಕೆ ಕ್ರಿಕೆಟ್ ಪಂದ್ಯಾವಳಿ

• ಪ್ರಜೋದಯ ವರದಿ

ಸಕಲೇಶಪುರ: ತಾಲ್ಲೂಕಿನ ಸರ್ಕಾರಿ, ಹೊರಗುತ್ತಿಗೆ ನೌಕರರು ಮತ್ತು ಕಾರ್ಯನಿರತ ಪತ್ರ ಕರ್ತರಿಗೆ ಮನರಂಜನೆ ನೀಡುವ ಉದ್ದೇಶದಿಂದ ಏ.25 ಮತ್ತು 26ರಂದು ಪಟ್ಟಣದ ಸುಭಾಷ್ ಮೈದಾನದಲ್ಲಿ ಅಫೀಷಿ ಯಲ್ ಕ್ರಿಕೆಟ್ ಲೀಗ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ ಎಂದು ಪತ್ರಕರ್ತರ ಸುಧೀರ್ ಭಟ್ ಅವರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಒಟ್ಟು 14 ತಂಡಗಳಿಗೆ ಮಾತ್ರ ಅವಕಾಶವಿದ್ದು, ಪಂದ್ಯ 4 ಓವರ್‌ಗಳಾಗಿರುತ್ತದೆ. ಫೈನಲ್ ಪಂದ್ಯಕ್ಕೆ ತೃತೀಯ ಅಂಪೈರ್ ವ್ಯವಸ್ಥೆ ಇರಲಿದೆ ಎಂದರು.

ಆಟಗಾರರುಕಡ್ಡಾಯವಾಗಿ ಸರ್ಕಾರಿ ಸೇವೆಯಲ್ಲಿರಬೇಕು ಹಾಗೂ ಗುರುತಿನ ಚೀಟಿ ತೋರಿಸುವುದು ಕಡ್ಡಾಯ. ಶಾಸಕ ಸಿಮೆಂಟ್ ಮಂಜು ಅವರು ಪಂದ್ಯಾವಳಿ ಉದ್ಘಾಟಿಸಲಿದ್ದು, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಮುರುಳಿ ಮೋಹನ್ ಹಾಗೂ ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರು, ಉಪಾಧ್ಯಕ್ಷರಾದ ಹೆಚ್.ಬಿ. ಮದನಗೌಡ ಇತರರು ಉಪಸ್ಥಿತರಿರುವರು. ಪ್ರಥಮ ಬಹುಮಾನ 33,333 ಹಾಗು ದ್ವಿತೀಯ ಬಹುಮಾನ 22,222 ನೀಡಲಾಗುವುದು. ಪಂದ್ಯ ಶ್ರೇಷ್ಠ, ಉತ್ತಮ ಬೌಲರ್, ಬ್ಯಾಟರ್, ಫೀಲ್ಡರ್ ಹಾಗೂ ಸರಣಿ ಶ್ರೇಷ್ಠ ಪ್ರಶಸ್ತಿ ನೀಡಲಾಗುವುದೆಂದರು. ಪಂದ್ಯಾವಳಿಯ ಪ್ರವೇಶ ಶುಲ್ಕ 3,333 ರೂ. ಪಾವತಿ ಮಾಡಬೇಕೆಂದು ತಿಳಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಯೋಗೇಶ್, ನವೀನ್ ಸದಾ, ದಯಾನಂದ್, ಸಾಸು ವಿಶ್ವನಾಥ್ ಉಪಸ್ಥಿತರಿದ್ದರು.

ಸಮ ಸಮಾಜ ನಿರ್ಮಾಣಕ್ಕೆ ಬಸವಣ್ಣ ಸಾಮಾಜಿಕ ಕ್ರಾಂತಿ

• ಪ್ರಜೋದಯ ವರದಿ

ಹಾಸನ: ಸಮಾಜದಲ್ಲಿನ ಅಸಮಾನತೆ ತೊಲಗಬೇಕೆಂದು ಜಾತಿಯತೆ, ಅಸ್ಪೃಶ್ಯತೆ, ಶ್ರೀಮಂತ-ಬಡವ ಎಂಬ ಭೇದವಿಲ್ಲದ ಸಮ ಸಮಾಜ ನಿರ್ಮಾಣಕ್ಕಾಗಿ ಬಸವಣ್ಣನವರು ಸಾಮಾಜಿಕ ಕ್ರಾಂತಿ ಮಾಡಿದ್ದಾರೆಂದು ನಿವೃತ್ತ ಪ್ರಾಂಶುಪಾಲ ಜಗದೀಶ್ ಬಾಬು ಅವರು ಸ್ಮರಿಸಿದರು.

ನಗರದ ಸಿಐಟಿಯು ಕಚೇರಿ ಶ್ರಮದಲ್ಲಿ ಬಸವಣ್ಣ ಜಯಂತಿ ಅಂಗವಾಗಿ ಜಾತಿ ವ್ಯವಸ್ಥೆ- ಅಸ್ಪೃಶ್ಯತೆ ವಿರುದ್ಧ ಬಸವಾದಿ ಶರಣರ ವಚನಗಳ ವಾಚನ ಮತ್ತು ವಿಶ್ಲೇಷಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಸವಣ್ಣನವರು 12ನೇ ಶತಮಾನದಲ್ಲಿಯೇ ಪುರೋಹಿತ ಬ್ರಾಹ್ಮಣಶಾಹಿ, ಜಾತಿಯತೆ, ಅಸ್ಪೃಶ್ಯತೆ, ಅಸಮಾನತೆ ಮತ್ತು ಸಾಮಾಜಿಕ ಅನಿಷ್ಟಗಳ ವಿರುದ್ಧ ಸಾಮಾಜಿಕ ಕ್ರಾಂತಿ ನಡೆಸಿದ ಬಹುದೊಡ್ಡ ದಾರ್ಶನಿಕ ಎಂದು ಬಣ್ಣಿಸಿದರು.

ಎಲ್ಲಾ ಜಾತಿ, ಸಮುದಾಯಗಳಲ್ಲಿ ತಮ್ಮ ವಿಚಾರಗಳ ಮುಲಕ ಪ್ರಭಾವ ಬೀರಿ ಅನುಭವ ಮಂಟಪದ ಮೂಲಕ ಶರಣರನ್ನು ಸಂಘಟಿಸಿ ವಚನ ಚಳುವಳಿಯನ್ನು ಕಟ್ಟುವ ಮೂಲಕ ಸಕಲ ಜೀವಿಗಳಿಗೂ ಒಳಿತಾಗಬೇಕೆಂಬ ಉದ್ದೇಶ ಹೊಂದಿದ್ದರು. ಕಾಯಕವೇ ಕೈಲಾಸ ಎಂಬ ತತ್ವದ ಅಡಿಯಲ್ಲಿ ದುಡಿಯುವ ವರ್ಗದ ಪ್ರಜ್ಞೆಯನ್ನು ಮೂಡಿಸಿದ್ದರು. ಅವರ ತತ್ವಗಳು ಇವತ್ತಿಗೂ ಪ್ರಸ್ತುತವಾಗಿವೆ ಎಂದರು.

ಇಂದು ಬಂಡವಾಳಶಾಹಿ-ಭೂಮಾಲೀಕ ವರ್ಗವು ತಮ್ಮ ಆಸ್ತಿ, ಸಂಪತ್ತನ್ನು ಹೆಚ್ಚಿಸಿಕೊಳ್ಳಲು ದೇಶದಲ್ಲಿ ಜಾತಿ ವ್ಯವಸ್ಥೆ, ಅಸ್ಪೃಶ್ಯತೆಯನ್ನು ಪೋಷಿಸಿ ಉಳಿಸಿಕೊಂಡು ಬರುತ್ತಿದೆ. ಅದರ ವಿರುದ್ಧ ದುಡಿಯುವ ವರ್ಗದ ಚಳುವಳಿಯನ್ನು ಗಟ್ಟಿಗೊಳಿಸಬೇಕಿದೆ. ಆ ಮೂಲಕ ಬಸವಾದಿ ಶರಣರ ಆಶಯಗಳನ್ನು ಎತ್ತಿ ಹಿಡಿಯಬೇಕೆಂದು ಹೇಳಿದರು.

ಸಾಹಿತಿ ಹರೀಶ್ ಕಟ್ಟೆಬೆಳಗುಲಿ ಅವರು ಮಾತನಾಡಿ, ಸಮಾಜದಲ್ಲಿ ಶೋಷಣೆ ನಿಲ್ಲಬೇಕಿದೆ. ಬಸವಣ್ಣನವರ ತತ್ವ ಆದರ್ಶಗಳನ್ನು ಯುವ ಜನರಲ್ಲಿ ಬಿತ್ತಬೇಕಿದೆ ಎಂದರು.

ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಂಚಾಲಕಿ ಮಮತಾ ಶಿವು, ಬಿಜಿವಿಎಸ್ ಮುಖಂಡರಾದ ಹೆಚ್.ಟಿ.ಗುರುರಾಜ್, ಸಿಐಟಿಯು ಮುಖಂಡ ಧರ್ಮೇಶ್, ಬ್ಯಾಂಕ್ ನೌಕರರ ಸಂಘದ ಮುಖಂಡ ಪರಮಶಿವಯ್ಯ, ಲೇಖಕ ಕೆ.ಎಸ್.ರವಿಕುಮಾರ್, ಕಲಾವಿದ ಗ್ಯಾರಂಟಿ ರಾಮಣ್ಣ, ಕೆ.ಪಿ.ಆರ್.ಎಸ್. ಜಿಲ್ಲಾಧ್ಯಕ್ಷ ನವೀನ್‌ಕುಮಾರ್, ಪೃಥ್ವಿ, ಪ್ರಮೀಳಾ ಕೊಟ್ಟೂರು ಹಾಜರಿದ್ದರು.

ಎಂಸಿಇ ಕಾಲೇಜಿನಲ್ಲಿ ಕಾರ್ಯಾಗಾರ ಯಶಸ್ವಿ

• ಪ್ರಜೋದಯ ವರದಿ

ಹಾಸನ: ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ಅಂಡ್ ಬ್ಯುಸಿನೆಸ್ ಸಿಸ್ಟಮ್ಸ್ ವಿಭಾಗದಿಂದ ಬುಧವಾರ ಸುಧಾರಿತ ವಿಕೇಂದ್ರೀಕೃತ ಅಪ್ಲಿಕೇಶನ್ ಮತ್ತು ಸ್ಮಾರ್ಟ್ ಕಾಂಟ್ರಾಕ್ಟ್‌ಗಳ ಕುರಿತು ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ವಿಕೇಂದ್ರೀಕೃತ ತಂತ್ರಜ್ಞಾನ, ಬ್ಲಾಕ್ ಚೈನ್‌ನ ಮೂಲ ಪರಿಕಲ್ಪನೆ ಮತ್ತು ಸ್ಮಾರ್ಟ್ ಕಾಂಟ್ರಾಕ್ಟ್ ಅಭಿವೃದ್ಧಿ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ತರಬೇತಿ ನೀಡಿದರು.

ವಿಭಾಗದ ಮುಖ್ಯಸ್ಥ ಡಾ.ಬಿ.ರಮೇಶ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಬ್ಲಾಕ್ ಚೈನ್ ತಂತ್ರಜ್ಞಾನವು ಡಿಜಿಟಲ್ ಲೆಡ್ಜರ್ ಇದ್ದ ಹಾಗೆ ಎಂದರು. ಸಾವಿರಾರು ಜನರೊಂದಿಗೆ ಹಂಚಿಕೊಂಡಿರುವ ಡಿಜಿಟಲ್ ನೋಟ್‌ಬುಕ್ ಎಂದು ಭಾವಿಸಿ ಬಳಸಬೇಕು. ಒಮ್ಮೆ ಅದರಲ್ಲಿ ಏನನ್ನಾದರೂ ಬರೆದರೆ ಎಲ್ಲರಿಗೂ ತಿಳಿಯದೆ ಯಾರೂ ಅದನ್ನು ಅಳಿಸಲು ಅಥವಾ ಬದಲಾಯಿಸಲು ಸಾಧ್ಯವಿಲ್ಲ. ಏಕೆಂದರೆ ಪ್ರತಿಯೊಂದು ಹೊಸ ನಮೂದು ಅದನ್ನು ಬ್ಲಾಕ್ ಎಂದು ಕರೆಯಲಾಗುತ್ತದೆ. ಬಲವಾದ ಕ್ರಿಪ್ಟೋಗ್ರಫಿಯನ್ನು (ಗುಪ್ತ ಲಿಪಿ ಶಾಸ್ತ್ರ) ಬಳಸಿಕೊಂಡು ಹಿಂದಿನದಕ್ಕೆ ಸಂಬಂಧ ಹೊಂದಿರುತ್ತದೆ. ಪ್ರಸ್ತುತ ಮತ್ತು ಭವಿಷ್ಯದ ತಂತ್ರಜ್ಞಾನ ಪ್ರಪಂಚಕ್ಕೆ ಹಾಗು ವಿದ್ಯಾರ್ಥಿ ಸಮುದಾಯಕ್ಕೆ ಈ ತಂತ್ರಜ್ಞಾನದ ಲಾಭ ಹೆಚ್ಚಿದೆ ಎಂದರು.

ಡಾ.ಆರ್.ಸುನಿತಾ, ಆರ್.ಪಂಕಜ ಅವರು ವಿಕೇಂದ್ರೀಕೃತ ಅಪ್ಲಿಕೇಶನ್ ಆರ್ಕಿಟೆಕ್ಚರ್, ಸ್ಮಾರ್ಟ್ ಕಾಂಟ್ರಾಕ್ಟ್ ಅನುಷ್ಠಾನ ಮತ್ತು ಪ್ರಸ್ತುತ ಉದ್ಯಮದ ಪ್ರವೃತ್ತಿಗಳ ಬಗ್ಗೆ ವಿವರಿಸಿದರು.

ಸಹಾಯಕ ಪ್ರಾಧ್ಯಾಪಕರಾದ ಡಾ.ಟಿ.ಎಸ್. ಹೇಮಂತ್, ಎಂ.ಜಿ.ಉಷಾ ಮತ್ತಿತರರಿದ್ದರು.

ಖಾತೆ ಮಾಡಲು ವಿಳಂಬ: ಅನಿರ್ದಿಷ್ಟಾವಧಿ ಧರಣಿ



• ಪ್ರಜೋದಯ ವರದಿ

ಹಾಸನ: ಹಕ್ಕುಪತ್ರ ವಿತರಿಸಿ 4 ವರ್ಷಗಳಾದರೂ ಖಾತೆ ಮಾಡಿಕೊಡದೆ ವಿಳಂಬ ಮಾಡಲಾ ಗುತ್ತಿದೆಂದು ಆರೋಪಿಸಿ ಅರಕಲಗೂಡು ತಾಲ್ಲೂಕು ರಾಮನಾಥಪುರದ ವಸತಿ ರಹಿತರು ಬುಧವಾರ ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದಾರೆ.

ಈ ವೇಳೆ ಮಾತನಾಡಿದ ಸಂತ್ರಸ್ತ ವಿಜಯ್, 2020-21ನೇ ಸಾಲಿನಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ಯೋಜನೆ ಯಡಿ ಅರ್ಹ ಪಲಾನುಭವಿಗಳ ಪಟ್ಟಿಯನ್ನು ಗ್ರಾಮ ಪಂಚಾಯಿತಿ ತಯಾರಿಸಿ, ಸಾರ್ವಜನಿಕವಾಗಿ ಪ್ರಕಟಿಸಿತ್ತು. ನೋಟೀಸ್ ಬೋರ್ಡ್‌ನಲ್ಲೂ ಪಟ್ಟಿ ಪ್ರದರ್ಶಿಸ ಲಾಗಿತ್ತು. ನಂತರ ತಾಲ್ಲೂಕು ದಂಡಾಧಿಕಾರಿ ಸಮ್ಮುಖದಲ್ಲಿ ಸಭೆ ಹಾಗು ಗ್ರಾಮಸಭೆ ನಡೆಸಿ ಯಾವುದೇ ಆಕ್ಷೇಪಣೆ ಇಲ್ಲದ ಹಿನ್ನಲೆ ಅನುಮೋದನೆ ನೀಡಲಾಗಿತ್ತು. ಅದಾದ ಬಳಿಕ 2022ರ ಅ.10 ರಂದು ರಾಮನಾಥಪುರ ನೂತನ ಬಸ್ ನಿಲ್ದಾಣ ಉದ್ಘಾಟನಾ ಕಾರ್ಯಕ್ರಮ ಸಂದರ್ಭದಲ್ಲಿ ಜನಪ್ರತಿನಿಧಿಗಳು ಹಾಗು ಅಧಿಕಾರಿಗಳ ಸಮ್ಮುಖದಲ್ಲಿ 47 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಗಿದೆ ಎಂದರು.

ನಾಲ್ಕು ವರ್ಷ ಕಳೆದರೂ ಇದುವರೆಗೆ ಖಾತೆ ಮಾಡಿಕೊಡದೆ ಅನ್ಯಾಯ ಮಾಡಲಾಗಿದೆ. ಪಂಚಾಯಿತಿ ಅಧಿಕಾರಿಗಳು ಕೋವಿಡ್ ಅವಧಿಯಲ್ಲಿ ಕೇವಲ 15 ದಿನ ಮಾತ್ರ ನೋಟೀಸ್ ನೀಡಲಾಗಿದೆಂದು ತಪ್ಪು ಮಾಹಿತಿ ನೀಡುತ್ತಿದ್ದಾರೆ. ಈಗ ಕೆಲವರು ಹಣಕ್ಕಾಗಿ ಉದ್ದೇಶಪೂರ್ವಕ ವಾಗಿ ತಕರಾರು ಎಬ್ಬಿಸುತ್ತಿದ್ದಾರೆ. ಅದಕ್ಕೆ ಜನಪ್ರತಿನಿಧಿಗಳ ಕುಮಕ್ಕೂ ಇದೆ ಎಂದು ದೂರಿದರು.

ಈಗ ಖಾತೆ ಮಾಡಲು ಹಲವು ದಾಖಲೆ ಕೇಳಲಾಗುತ್ತಿದೆ. ಹೆಚ್ಚಿನ ದಾಖಲೆ ನೀಡಲು ಸಿದ್ಧರಾಗಿದ್ದರೂ, ಮೂರು ತಲೆಮಾರಿನ ವಂಶವೃಕ್ಷದಂತಹ ದಾಖಲೆ ಒದಗಿಸುವುದು ಬಡ ಕಾರ್ಮಿಕರಿಗೆ ಸಾಧ್ಯವಾಗುತ್ತಿಲ್ಲ. ಅದನ್ನೇ ನೆಪ ಮಾಡಿಕೊಂಡು ಅಧಿಕಾರಿಗಳು ಖಾತೆ ನೀಡಲು ವಿಳಂಬ ಮಾಡುತ್ತಿದ್ದಾರೆಂದು ಆರೋಪಿಸಿದರು.

ಖಾತೆಗಾಗಿ ಈ ಹಿಂದೆಯೂ ಹಲವು ಪ್ರತಿಭಟನೆ ಮಾಡಿದರೂ ಯಾವುದೇ ಸ್ಪಂದನೆ ಸಿಕ್ಕಿಲ್ಲ. ನಾವು ಬಾಡಿಗೆ ಕಟ್ಟಿ ಬದುಕುವುದು ಕಷ್ಟವಾಗಿದೆ. ಹಾಗಾಗಿ ನಾವು, ಸ್ವಂತ ಮನೆ ಕಟ್ಟಿಕೊಳ್ಳಲು ಅವಕಾಶ ನೀಡಬೇಕು. ಸಂಬಂಧಿತ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಖಾತೆ ಮಾಡಿ, ನೊಂದ ಬಡವರಿಗೆ ನ್ಯಾಯ ಒದಗಿಸಬೇಕೆಂದು ಮನವಿ ಮಾಡಿದರು. ಗ್ರಾಮದ ಗೌರಿ, ಕಲಾವತಿ, ಉಷಾ, ರಾಗಿಣಿ, ರೇಖಾ ಇದ್ದರು.

ಸೋಲಾರ್ ಪಂಪ್‌ಸೆಟ್‌ಗೆ ವಿದ್ಯುತ್ ಕಲ್ಪಿಸದಿದ್ದರೆ ಕ್ರಮದ ಎಚ್ಚರಿಕೆ



• ಪ್ರಜೋದಯ ವರದಿ

ಅರಕಲಗೂಡು: ತಾಲ್ಲೂಕಿನಲ್ಲಿ ಸೋಲಾರ್ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸದಿದ್ದರೆ ಕ್ರಮ ಜರುಗಿಸುವುದಾಗಿ ಎ.ಮಂಜು ಅವರು ಎಚ್ಚರಿಸಿದರು.

ಪಟ್ಟಣದ ತಾಲ್ಲೂಕು ಕಚೇರಿ ಅವರಣದಲ್ಲಿ ಸೆಸ್ಕಾಂ ಅಧಿಕಾರಿಗಳು, ಸೌರ ಪಂಪ್‌ಸೆಟ್ ಕಂಪನಿಯ ಪ್ರತಿನಿಧಿ ಗಳು ಹಾಗೂ ರೈತ ಫಲಾನುಭವಿಗಳ ಸಭೆ ನಡೆಸಿ ಮಾತನಾಡಿದ ಅವರು, ರೈತರು ಮತ್ತು ಇಲಾಖೆಯ ಅಧಿಕಾರಿ ಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸುದೀರ್ಘ ವಾಗಿ ಚರ್ಚೆ ನಡೆಸಲಾಗಿದೆ ಎಂದು ಹೇಳಿದರು.

ಗಡುವು: ಮೇ 12ರೊಳಗಾಗಿ ಬಾಕಿ ಇರುವ ಎಲ್ಲಾ ಕೆಲಸಗಳನ್ನು ಪೂರ್ಣಗೊಳಿಸುವುದಾಗಿ ವೆಂಡರ್‌ಗಳು (ಕಂಪನಿಗಳು) ಭರವಸೆ ನೀಡಿದ್ದಾರೆ.

ಅಂತಿಮ ಸಭೆ: ಮೇ 12ರಂದು ಮತ್ತೊಮ್ಮೆ ಸಭೆ ನಡೆಸಲಾಗುವುದು. ಅಷ್ಟರೊಳಗೆ ಎಲ್ಲಾ 496ರೈತರಿಗೆ ಮೂಲಭೂತ ಸೌಕರ್ಯ ಒದಗಿಸಿ, ಸೌರ ಪಂಪ್‌ಸೆಟ್‌ಗಳು ಕಾರ್ಯಾರಂಭ ಮಾಡುವಂತೆಸೂಚಿಸಲಾಗಿದೆ ಎಂದರು.

ಮುಂದಿನ ಕ್ರಮ: ಒಂದು ವೇಳೆ ಮೇ 12ರೊಳಗಾಗಿ ಕೆಲಸಗಳು ಪೂರ್ಣಗೊಳ್ಳದಿದ್ದರೆ, ಆ ದಿನ ನಡೆಯುವ ಸಭೆಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಲಾಗಿದೆ. ಒಟ್ಟಿನಲ್ಲಿ, ಮೇ 12ರೊಳಗೆ ಎಲ್ಲಾ ರೈತರಿಗೆ ಸೌರ ಪಂಪ್‌ಸೆಟ್ ಸೌಲಭ್ಯ ಕಲ್ಪಿಸುವುದಕ್ಕಾಗಿ ಕ್ರಮ ಕೈಗೊಳ್ಳಲಾಗುತ್ತಿದೆಂದು ತಿಳಿಸಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK